ಸೀತಾ ಬ್ಯಾಂಕ್
SEETHA BANK

# ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.

# SRI SEETHARAGHAVA SOUHARDA SAHAKARA BANK NIYAMITHA

RBI Lic. No: UBD/KAN/1564P

ನಿಮ್ಮ ನಂಬಿಕೆಯೇ...
ನಮ್ಮ ವಿಶ್ವಾಸ...

## ANNUAL REPORT

## 26ನೇ ವಾರ್ಷಿಕ ವರದಿ 2023-24



ದಿನಾಂಕ : 25–07–2024 ಗುರುವಾರ
ಸ್ಥಳ : ಶ್ರೀ ಗಣೇಶ ಸದನ, ಹೊಸದುರ್ಗ.



## ಶ್ರೀ ಹಂಜಿ ಶಿವಸ್ವಾಮಿ
ಅಧ್ಯಕ್ಷರು

| | | |
|---|---|---|
| ಅಧ್ಯಕ್ಷರು | : | ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ಗಣೇಶ ಸದನ ಟ್ರಸ್ಟ್ (ರಿ.), ಹೊಸದುರ್ಗ |
| ಗೌರವ ಅಧ್ಯಕ್ಷರು | : | ವರ್ತಕರ ಸಂಘ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ವಿನಾಯಕ ಸೇವಾ ಸಮಿತಿ (ರಿ), ಹೊಸದುರ್ಗ |

# 26ನೇ ಸರ್ವ ಸದಸ್ಯರ ಮಹಾಸಭೆಯ ನೋಟೀಸ್

ಮಾನ್ಯ ಸದಸ್ಯರೇ,

2023–24 ನೇ ಸಾಲಿನ ಬ್ಯಾಂಕಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ 25–07–2024 ನೇ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಸರಿಯಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿಯವರ ಘನ ಅಧ್ಯಕ್ಷತೆಯಲ್ಲಿ ನಗರದ ಬಸ್ ನಿಲ್ದಾಣದ ಬಳಿಯಿರುವ "ಶ್ರೀ ಗಣೇಶ ಸದನ" ಸಭಾಂಗಣದಲ್ಲಿ ಕರೆಯಲಾಗಿದೆ.

ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಲು ವಿನಂತಿಸುತ್ತೇವೆ.

## ಸಭೆಯಲ್ಲಿ ಚರ್ಚಿಸುವ ವಿಷಯಗಳು

1. ಪ್ರಾರ್ಥನೆ ಹಾಗೂ ಸ್ವಾಗತ
2. 25ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿ ದಾಖಲು ಮಾಡುವುದು.
3. 2023–24ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.
4. ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.
5. ಕಳೆದ ಸಾಲಿನಲ್ಲಿ ಸೇರ್ಪಡೆಗೊಂಡ ಸದಸ್ಯರು ಹಾಗೂ ಸದಸ್ಯತ್ವದಿಂದ ವಿಮುಕ್ತಿ ಗೊಳಿಸಿದ ಸದಸ್ಯರ ವರದಿಯನ್ನು ಓದಿ ಒಪ್ಪಿ ಅಂಗೀಕರಿಸುವುದು.
6. 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಪಾಲನಾ ವರದಿಯ ನಡವಳಿಕೆಗಳನ್ನು ಓದಿ ಒಪ್ಪಿ ಅಂಗೀಕರಿಸುವುದು.
7. 2023–24ನೇ ಸಾಲಿನ ಲಾಭ ಹಂಚಿಕೆ ಅನುಮೋದಿಸುವುದು.
8. ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಅನುಮೋದಿಸುವುದು.
9. 2024–25ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡುವುದು.
10. 2024–25ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸುವುದು.
11. 2024–25ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ : 28.06.2024 ರಂದು ನಿರ್ದೇಶಕ ಮಂಡಲಿ ಸಭಾತೀರ್ಮಾನ ಸಂಖ್ಯೆ : 14 ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸುವ ವಿಚಾರ.
12. ದಿನಾಂಕ:27–04–2024 ರಂದು ನಡೆದ ನಿರ್ದೇಶಕ ಮಂಡಳಿಯ ಸಭಾ ತೀರ್ಮಾನ ಸಂಖ್ಯೆ 19 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸುವುದು.
13. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖಾಯಂ ಸಿಬ್ಬಂದಿ ವರ್ಗದವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ದಿನಾಂಕ : 24.11.2023 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನದನ್ವಯ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಅನುಮೋದಿಸುವ ವಿಚಾರ.
14. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ದಿನಾಂಕ : 20.10.2023 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನದನ್ವಯ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಅನುಮೋದಿಸುವ ವಿಚಾರ ಹಾಗೂ ಹೊಸದಾಗಿ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನ ಕೈಗೊಳ್ಳುವ ವಿಚಾರ.
15. ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸುವ ವಿಚಾರ.
16. ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯ್ದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.
17. ದಿನಾಂಕ:27–07–2023 ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭಾ ತೀರ್ಮಾನದ ಅನ್ವಯ ಹೆಚ್ಚುವರಿ ಷೇರು ಧನ ತೊಡಗಿಸದೇ ಇರುವ ಸದಸ್ಯರುಗಳ ಬಗ್ಗೆ ದಿನಾಂಕ:28–06–2024 ರಂದು ನೆಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–17 ರ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.
18. ದಿನಾಂಕ:28.06.2024 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–18ರ ಅನ್ವಯ ಬ್ಯಾಂಕಿನ ಕಾರ್ಯ ನಿರ್ವಹಣಾ ಸಮಿತಿ (BOM) ಯನ್ನು ಪುನರ್‌ರಚಿಸಿರುವುದನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸುವ ವಿಚಾರ.
19. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

**ಕಾರ್ಯಕಾರಿ ಮಂಡಳಿ ಆದೇಶದ ಮೇರೆಗೆ**

**(ಎನ್. ಮಂಜುನಾಥ)**
**ಪ್ರಧಾನ ವ್ಯವಸ್ಥಾಪಕರು,**
**ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ**

ದಿನಾಂಕ : 28.06.2024

**ಸೂಚನೆ:** ಮಹಾಸಭೆಯಲ್ಲಿ ಸದಸ್ಯರು ಚರ್ಚಿಸಬೇಕಾದ ವಿಷಯಗಳ ಬಗ್ಗೆ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಲ್ಲಿ ಐದು(05) ದಿನಗಳ ಮುಂಚಿತವಾಗಿ ಲಿಖಿತವಾಗಿ ನೀಡಬಹುದು. ಅಂತಹ ವಿಷಯಗಳಿಗೆ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲು ಅವಕಾಶ ನೀಡಲಾಗುವುದು. ಸುಸ್ತಿದಾರರಲ್ಲದ ಸದಸ್ಯರುಗಳಿಗೆ ಮಾತ್ರ ಅವಕಾಶವಿರುತ್ತದೆ.

# 26ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ತಿಳುವಳಿಕೆ ಪತ್ರ

**1. ಪ್ರಾರ್ಥನೆ ಹಾಗೂ ಸ್ವಾಗತ**

ಟಿಪ್ಪಣಿ: ಬ್ಯಾಂಕಿನ ಸಿಬ್ಬಂದಿಯವರಿಂದ ಪ್ರಾರ್ಥನೆ ಹಾಗೂ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಡಿ.ಆದಿರಾಜಯ್ಯವರಿಂದ ಸ್ವಾಗತ

**2. 25ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿ ದಾಖಲು ಮಾಡುವುದು.**

ಟಿಪ್ಪಣಿ: 25ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿದ ನಂತರ ದಾಖಲು ಮಾಡುವುದು.

**3. 2023–24ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.**

ಟಿಪ್ಪಣಿ: 2023–24ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚಿಸುವುದು.

**4. ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.**

ಟಿಪ್ಪಣಿ: 27–07–2023ರಂದು ನಡೆದ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.

**5. ಕಳೆದ ಸಾಲಿನಲ್ಲಿ ಸೇರ್ಪಡೆಗೊಂಡ ಸದಸ್ಯರು ಹಾಗೂ ಸದಸ್ಯತ್ವದಿಂದ ವಿಮುಕ್ತಿ ಗೊಳಿಸಿದ ಸದಸ್ಯರ ವರದಿಯನ್ನು ಓದಿ ಒಪ್ಪಿ ಅಂಗೀಕರಿಸುವುದು.**

ಟಿಪ್ಪಣಿ: ವರ್ಷದ ಆರಂಭದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 2371 ಈ ವರ್ಷ ತಮ್ಮ ಸದಸ್ಯತ್ವವನ್ನು ಹಿಂಪಡೆದವರ ಸಂಖ್ಯೆ 75 ಮತ್ತು ಈ ವರ್ಷದಲ್ಲಿ ಹೊಸದಾಗಿ 201 ಜನ ಸದಸ್ಯತ್ವ ಪಡೆದಿದ್ದು ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ2497 ಅನ್ನು ಒಪ್ಪಿ ಅಂಗೀಕರಿಸಬಹುದು.

**6. 2023–24ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಪಾಲನಾ ವರದಿಯ ನಡವಳಿಕೆಗಳನ್ನು ಓದಿ ಒಪ್ಪಿ ಅಂಗೀಕರಿಸುವುದು.**

ಟಿಪ್ಪಣಿ: 25ನೇ ಸರ್ವಸದಸ್ಯರ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾದ ಲೆಕ್ಕಪರಿಶೋಧನಾ ವರದಿಗೆ, ಆಡಳಿತ ಮಂಡಲಿ ಸಲ್ಲಿಸಿದ ಪಾಲನಾ ವರದಿಯನ್ನು ಪರಿಶೀಲಿಸಿ ಒಪ್ಪಿ ಅಂಗೀಕರಿಸುವುದು.

**7. 2023–24ನೇ ಸಾಲಿನ ಲಾಭ ಹಂಚಿಕೆ ಅನುಮೋದಿಸುವುದು.**

ಟಿಪ್ಪಣಿ: 2023–24ನೇ ಸಾಲಿನಲ್ಲಿ ಬ್ಯಾಂಕು ರೂ 1,54,69,138.00ಗಳು ಲಾಭಗಳಿಸಿದ್ದು ನೋಟಿಸಿನಲ್ಲಿ ತಿಳಿಸಿದಂತೆ ಲಾಭವನ್ನು ವಿಲೆವಾರಿ ಮಾಡಲಾಗುವುದು.

**8. ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಅನುಮೋದಿಸುವುದು.**

ಟಿಪ್ಪಣಿ: ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಕೆಲವು ಶಿರ್ಷಿಕೆಗಳಡಿ ಹೆಚ್ಚಿನ ವೆಚ್ಚವಾಗಿರುತ್ತದೆ ಅದನ್ನು ಪರಿಶೀಲಿಸಿ ಅನುಮೋದಿಸಬಹುದು.

**9. 2024–25ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡುವುದು.**

ಟಿಪ್ಪಣಿ: 2024–25ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡಬಹುದಾಗಿದೆ.

**10. 2024–25ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸುವುದು.**

ಟಿಪ್ಪಣಿ: 2023–24ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸಬಹುದು.

**11. 2024–25 ನೇ ಸಾಲಿಗೆ ಶಾಸನಬದ್ಧ ಲೆಕ್ಕ ಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ : 28.06.2024 ರಂದು ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ : 14ರಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸುವ ವಿಚಾರ.**

ಟಿಪ್ಪಣಿ: 2024–25 ನೇ ಸಾಲಿಗೆ ಶಾಸನ ಬದ್ಧ ಲೆಕ್ಕ ಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ : 28.06.2024 ರಂದು ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ : 14 ರಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸಬಹುದಾಗಿದೆ.

**12. ದಿನಾಂಕ:27–04–2024 ರಂದು ನಡೆದ ನಿರ್ದೇಶಕ ಮಂಡಳಿಯ ಸಭಾ ತೀರ್ಮಾನ ಸಂಖ್ಯೆ 19 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸುವುದು.**

ಟಿಪ್ಪಣಿ: ದಿನಾಂಕ:27–04–2024 ರಂದು ನಡೆದ ನಿರ್ದೇಶಕ ಮಂಡಳಿಯ ಸಭಾ ತೀರ್ಮಾನ ಸಂಖ್ಯೆ 19 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸಬಹುದು.

**13. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖಾಯಂ ಸಿಬ್ಬಂದಿ ವರ್ಗದವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ದಿನಾಂಕ : 24.11.2023 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನದನ್ವಯ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಖಾಯಂ ಸಿಬ್ಬಂದಿ ವರ್ಗದವರು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ದಿನಾಂಕ:24.11.2023 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನದನ್ವಯ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಅನುಮೋದಿಸಬಹುದಾಗಿದೆ.

**14. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ದಿನಾಂಕ : 20.10.2023 ರಂದು ನಡೆದ ನಿರ್ದೇಶಕ ಮಂಡಲಿ ಸಭಾತೀರ್ಮಾನದನ್ವಯ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಅನುಮೋದಿಸುವ ವಿಚಾರ ಹಾಗೂ ಹೊಸದಾಗಿ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನ ಕೈಗೊಳ್ಳುವ ವಿಚಾರ.**

ಟಿಪ್ಪಣಿ: ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ವ್ಯವಸ್ಥಾಪಕ ನಿರ್ದೇಶಕರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು, ಈ ಬಗ್ಗೆ ದಿನಾಂಕ : 20.10.2023 ರಂದು ನಡೆದ ನಿರ್ದೇಶಕ ಮಂಡಲಿ ಸಭಾತೀರ್ಮಾನದನ್ವಯ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಅನುಮೋದಿಸಬಹುದಾಗಿದೆ ಹಾಗೂ ಹೊಸದಾಗಿ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಲು ತೀರ್ಮಾನ ಕೈಗೊಳ್ಳಬಹುದಾಗಿದೆ.

**15. ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸಬಹುದು.

**16. ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯ್ದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯ್ದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸಬಹುದು.

**17. ದಿನಾಂಕ:27–07–2023 ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭಾ ತೀರ್ಮಾನದ ಅನ್ವಯ ಹೆಚ್ಚುವರಿ ಷೇರು ಧನ ತೊಡಗಿಸದೇ ಇರುವ ಸದಸ್ಯರುಗಳ ಬಗ್ಗೆ ದಿನಾಂಕ:28–06–2024 ರಂದು ನೆಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–17 ರ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ದಿನಾಂಕ:27–07–2023 ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾ ಸಭಾ ತೀರ್ಮಾನದ ಅನ್ವಯ ಹೆಚ್ಚುವರಿ ಷೇರು ಧನ ತೊಡಗಿಸದೇ ಇರುವ ಸದಸ್ಯರುಗಳ ಬಗ್ಗೆ ದಿನಾಂಕ:28–06–2024 ರಂದು ನೆಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–17 ರ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿರುವುದನ್ನು ಒಪ್ಪಿ ಅನುಮೋದಿಸಬಹುದು.

**18. ದಿನಾಂಕ:28.06.2024 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–18ರ ಅನ್ವಯ ಬ್ಯಾಂಕಿನ ಕಾರ್ಯ ನಿರ್ವಹಣಾ ಸಮಿತಿ (BOM) ಯನ್ನು ಪುನರ್ರಚಿಸಿರುವುದನ್ನು ಪರಿಶೀಲಿಸಿ ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ದಿನಾಂಕ:28.06.2024 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–18ರ ಅನ್ವಯ ಬ್ಯಾಂಕಿನ ಕಾರ್ಯ ನಿರ್ವಹಣಾ ಸಮಿತಿ (BOM) ಯನ್ನು ಪುನರ್ರಚಿಸಿರುವುದನ್ನು ಪರಿಶೀಲಿಸಿ ಈ ಬಗ್ಗೆ ನಿರ್ದೇಶಕ ಮಂಡಲಿಯು ಕೈಗೊಂಡಿರುವ ನಿರ್ಣಯವನ್ನು ಪರಿಶೀಲಿಸಿ ಅನುಮೋದಿಸಬಹುದು.

**19. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.**

ಟಿಪ್ಪಣಿ: ಸದಸ್ಯರಿಂದ ಬರಬಹುದಾದ ಲಿಖಿತ ಪ್ರಶ್ನೆಗಳಿಗೆ ಉತ್ತರಿಸುವುದು.



## ಶ್ರೀ ಡಿ. ಆದಿರಾಜಯ್ಯ
**ಉಪಾಧ್ಯಕ್ಷರು**

ಉಪಾಧ್ಯಕ್ಷರು : ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ

ಉಪಾಧ್ಯಕ್ಷರು : ಶ್ರೀ ಗಣೇಶ ಸದನ ಟ್ರಸ್ಟ್ (ರಿ.), ಹೊಸದುರ್ಗ

ಉಪಾಧ್ಯಕ್ಷರು : ವರ್ತಕರ ಸಂಘ (ರಿ.), ಹೊಸದುರ್ಗ

ಉಪಾಧ್ಯಕ್ಷರು : ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ (ರಿ.), ಹೊಸದುರ್ಗ

ಉಪಾಧ್ಯಕ್ಷರು : ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ.), ಹೊಸದುರ್ಗ

# ಆಡಳಿತ ಮಂಡಲಿ ಸದಸ್ಯರು



**ಶ್ರೀ. ಹಂಜಿ ಶಿವಸ್ವಾಮಿ**
ಅಧ್ಯಕ್ಷರು



**ಶ್ರೀ. ಡಿ. ಆದಿರಾಜಯ್ಯ**
ಉಪಾಧ್ಯಕ್ಷರು



**ಶ್ರೀ. ಡಿ.ಎಂ.ಗಂಗಾಧರಗುಪ್ತ**
ನಿರ್ದೇಶಕರು



**ಶ್ರೀ. ಓ. ನಾಗೇಂದ್ರಯ್ಯ**
ನಿರ್ದೇಶಕರು



**ಶ್ರೀ. ಎನ್.ಎಸ್.ಓಬಯ್ಯ**
ನಿರ್ದೇಶಕರು

# ಆಡಳಿತ ಮಂಡಲಿ ಸದಸ್ಯರು



**ಶ್ರೀ. ಟಿ.ಎನ್.ಗುರುಮೂರ್ತಿ**
ನಿರ್ದೇಶಕರು



**ಶ್ರೀ. ಬಿ. ವಿ. ಕುಶಕುಮಾರ್**
ನಿರ್ದೇಶಕರು



**ಶ್ರೀಮತಿ. ವೀಣಾ ಎಸ್. ರಾವ್**
ನಿರ್ದೇಶಕರು



**ಶ್ರೀಮತಿ. ಪಾರ್ವತಮ್ಮ ಟಿ. ಸಿ.**
ನಿರ್ದೇಶಕರು



**ಶ್ರೀಮತಿ. ಲೀಲಾಂಬ ಕೆ.**
ನಿರ್ದೇಶಕರು



**ಶ್ರೀ ಬಾಹುಬಲಿ ಇ. ಟಿ.**
ನಿರ್ದೇಶಕರು



**ಶ್ರೀ. ಶ್ರೀನಿವಾಸಯ್ಯ ಬಿ. ಎಸ್.**
ನಿರ್ದೇಶಕರು



**ಶ್ರೀ. ಎಸ್. ಮೋಹನ್**
ವೃತ್ತಿಪರ ನಿರ್ದೇಶಕರು



**ಶ್ರೀಮತಿ ನಾಗಲಾಂಬಿಕ ಕಲ್ಮಠ್**
ವೃತ್ತಿಪರ ನಿರ್ದೇಶಕರು

# ಕಾರ್ಯನಿರ್ವಹಣಾ ಸಮಿತಿ ಸದಸ್ಯರು (BOM)



**ಶ್ರೀ. ಡಿ. ಆದಿರಾಜಯ್ಯ**
ಅಧ್ಯಕ್ಷರು



**ಶ್ರೀ. ಎಸ್. ಮೋಹನ್**
ಚಾರ್ಟರ್ಡ್ ಅಕೌಂಟೆಂಟ್



**ಶ್ರೀಮತಿ ನಾಗಲಾಂಬಿಕ ಕಲ್ಮಠ್**
ನಿವೃತ್ತ ಹಿರಿಯ ವ್ಯವಸ್ಥಾಪಕರು,
ಕೆನರಾ ಬ್ಯಾಂಕ್



**ಶ್ರೀ. ರಮೇಶ ಪಿ. ವಿ.**
ನಿವೃತ್ತ ಹಿರಿಯ ವ್ಯವಸ್ಥಾಪಕರು
ಐ.ಎನ್.ಜಿ. ವೈಶ್ಯ ಬ್ಯಾಂಕ್




# 26ನೇ ಸರ್ವಸದಸ್ಯರ ಮಹಾಸಭೆಯ ವಾರ್ಷಿಕ ವರದಿ

ಸನ್ಮಾನ್ಯ ಸಹಕಾರಿ ಬಂಧುಗಳೇ, ಸಸ್ನೇಹ ನಮಸ್ಕಾರಗಳು,

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಆಡಳಿತ ಮಂಡಲಿ ಪರವಾಗಿ ತಮ್ಮೆಲ್ಲರನ್ನೂ **"ಸರ್ವಸದಸ್ಯರ ವಾರ್ಷಿಕ ಮಹಾಸಭೆ"** ಗೆ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

ಕಳೆದ ಸಾಲಿನ ಆರ್ಥಿಕ ವ್ಯವಸ್ಥೆಯಿಂದ ಪುನಶ್ಚೇತನಗೊಂಡು ಆಡಳಿತದ ವ್ಯವಸ್ಥೆಯಲ್ಲಿ ಸರಿಯಾದ ಹಾದಿಗೆ ಮರಳುತ್ತಿರುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯವು ನೈಸರ್ಗಿಕ ವಿಕೋಪದಿಂದ ಬರಗಾಲವನ್ನು ಅನುಭವಿಸಿದ್ದಲ್ಲದೆ ರಾಜ್ಯದಲ್ಲಿ 45 ರಿಂದ 48 ಡಿಗ್ರಿ ಸೆ. ವರೆವಿಗೂ ಇದ್ದ ಬಿಸಿಲಿನ ತಾಪದಿಂದ ಜನರು ಹೈರಾಣರಾಗಿರುತ್ತಾರೆ. ಈ ರೀತಿಯ ನೈಸರ್ಗಿಕ ವಿಕೋಪದಿಂದಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ವ್ಯವಹಾರ, ಕೈಗಾರಿಕಾ ಉತ್ಪನ್ನ, ವ್ಯವಸಾಯ ಹಾಗೂ ಇತರೆ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿರುವುದಲ್ಲದೆ ಮಳೆ ಬೆಳೆ ಇಲ್ಲದೆ ರೈತರು ಸಾಕಷ್ಟು ಪ್ರಮಾಣದಲ್ಲಿ ನಿರುತ್ಸಾಹದಿಂದ ಕುಗ್ಗಿರುವುದನ್ನು ನಾವು ಪ್ರಸ್ತುತ ಸಾಲಿನಲ್ಲಿ ಗಮನಿಸಿದ್ದೇವೆ.

ಅಲ್ಲದೇ ಭೂಮಿಯ ಅಂತರ್ಜಲ ಮಟ್ಟ ಸಾಕಷ್ಟು ಪ್ರಮಾಣದಲ್ಲಿ ಕುಸಿಯುವುದರ ಜೊತೆಗೆ ರೈತರು ಬೆಳೆದ ಆಹಾರ ಧಾನ್ಯಗಳಿಗೆ ಸೂಕ್ತ ಬೆಲೆ ಸಿಗದೆ ಇರುವ ಪ್ರಯುಕ್ತ ಆರ್ಥಿಕ ಪರಿಸ್ಥಿತಿಯ ಮೇಲೆ ಸಂಪೂರ್ಣ ಪ್ರಭಾವ ಬೀರಿ ರಾಜ್ಯದ ರೈತರ ಜೀವನವೇ ದುಸ್ತರ ಪರಿಸ್ಥಿತಿಗೆ ಬಂದಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಸಂದಿಗ್ದ ಪರಿಸ್ಥಿತಿಯಲ್ಲಿ ಮುಂಗಾರು ಮಳೆಯು ಸ್ವಲ್ಪ ತಡವಾಗಿ ರಾಜ್ಯಕ್ಕೆ ಪ್ರವೇಶಿಸಿದ್ದು, ಮುಂಗಾರು ಮಳೆ ಸಂಭವಿಸಿ ಇತ್ತೀಚಿನ ದಿನದಲ್ಲಿ ರೈತರ ಮುಖದಲ್ಲಿ ಸಂತಸವನ್ನು ಕಾಣುತ್ತಿದ್ದೇವೆ.




ಭಾರತೀಯ ರಿಸರ್ವ್ ಬ್ಯಾಂಕಿನ ಇತ್ತೀಚಿನ ದಿನಗಳಲ್ಲಿ ಸಾಲ ನೀಡಿಕೆಯಲ್ಲಿ ಹಾಗೂ ಎನ್.ಪಿ.ಎ. ವ್ಯವಸ್ಥೆಯಲ್ಲಿ ಹೊಸ ಕಾಯ್ದೆಗಳನ್ನು ಜಾರಿಗೆ ತಂದಿದ್ದು ಈ ಕಾಯ್ದೆಗಳು ರಾಷ್ಟ್ರೀಕೃತ ಬ್ಯಾಂಕುಗಳು, ಸಾರ್ವಜನಿಕ ಕ್ಷೇತ್ರದ ವಾಣಿಜ್ಯ ಬ್ಯಾಂಕುಗಳು, ಸಹಕಾರ ಬ್ಯಾಂಕುಗಳಿಗೂ ಅನ್ವಯವಾಗಲಿದ್ದು ರಿಸರ್ವ್ ಬ್ಯಾಂಕಿನ ಈ ಹೊಸ ಕಾಯ್ದೆಗಳ ಕ್ರಮವು ಬ್ಯಾಂಕುಗಳ ಮೇಲೆ ಸಾಕಷ್ಟು ಪರಿಣಾಮವನ್ನುಂಟು ಮಾಡಿದೆ. ಈ ದೆಸೆಯಲ್ಲಿ ಬ್ಯಾಂಕುಗಳು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು, ಯಾವ ರೀತಿಯಲ್ಲಿ ಆಡಳಿತ ನಡೆಸಬೇಕೆಂಬುದೇ ಸಹಕಾರಿ ಕ್ಷೇತ್ರದ ಬ್ಯಾಂಕುಗಳಿಗೆ ದೊಡ್ಡ ಸವಾಲಾಗಿದೆ. ಬ್ಯಾಂಕಿನ ವತಿಯಿಂದ ಪಡೆದ ಸಾಲಗಾರರ ಸಾಲದ ಎನ್.ಪಿ.ಎ. ಪ್ರಮಾಣವನ್ನು ಇಷ್ಟು ದಿನ ತ್ರೈಮಾಸಿಕವಾಗಿ ಪರಿಗಣಿಸುತ್ತಿದ್ದು, ಇನ್ನು ಮುಂದೆ ಮಾಸಿಕವಾಗಿ ಪರಿಗಣಿಸುವುದಾಗಿ ರಿಸರ್ವ್ ಬ್ಯಾಂಕ್ ಘೋಷಿಸಿದ್ದು, ಈ ಕಾನೂನು ಸಹಕಾರಿ ಬ್ಯಾಂಕುಗಳ ಆಡಳಿತದ ಮೇಲೆ ಭಾರೀ ಪ್ರಮಾಣದ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ಎರಡು ಮಾತಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶವನ್ನು ವಾಣಿಜ್ಯ ಬ್ಯಾಂಕುಗಳಾಗಲೀ, ಸಹಕಾರಿ ಬ್ಯಾಂಕುಗಳಾಗಲೀ ಚಾಚೂ ತಪ್ಪದೆ ಪಾಲಿಸಬೇಕಾಗಿದ್ದು, ಈ ದೆಸೆಯಲ್ಲಿ ನಾವುಗಳು ಸಾಲ ನೀಡಿದ ಸಾಲಗಾರರುಗಳ ಸಾಲದ ವಸೂಲಾತಿಯ ಕ್ರಮವನ್ನು ಮಾಸಿಕ ಕಂತುಗಳಾಗಿ ಪರಿಗಣಿಸಿ ಸಾಲ ವಸೂಲಾತಿ ಮಾಡಲು ಸಾಧ್ಯವೇ ಎಂಬ ಪ್ರಶ್ನೆ ಬ್ಯಾಂಕುಗಳ ಆಡಳಿತ ಮಂಡಲಿಯ ಮುಂದೆ ಬರುವುದು ಸಹಜ ಅಲ್ಲವೇ? ರಾಜ್ಯ ಅನುಭವಿಸುತ್ತಿರುವ ಭೀಕರ ಬರಗಾಲದಿಂದ ಅಂತರ್ಜಲ ಮಟ್ಟ ಪ್ರಪಾತಕ್ಕೆ ಇಳಿದಿದ್ದು, ಇದರಿಂದ

ರೈತರ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ ಇತ್ಯಾದಿ ಬೆಳೆಗಳ ಇಳುವರಿ ಕುಸಿದಿದ್ದು ಮತ್ತು ಬೆಳೆಗಳಿಗೆ ಸೂಕ್ತ ಬೆಲೆ ಸಿಗದೆ ರೈತರ ಮೇಲೆ ಸಾಕಷ್ಟು ವ್ಯತಿರಿಕ್ತ ಪರಿಣಾಮ ಬೀರಿದೆ. ಇಂಥ ದುಸ್ತರ ಪರಿಸ್ಥಿತಿಯಲ್ಲಿ ಸಾಲ ವಸೂಲಾತಿ ಅತ್ಯಂತ ದುಸ್ತರವಾದ ಕೆಲಸವಾಗಿದೆ.

ನಮ್ಮ ರಾಜ್ಯದ ಬಹಳ ಹಿಂದುಳಿದ ಪ್ರದೇಶವಾದ ಚಿತ್ರದುರ್ಗ ಜಿಲ್ಲೆ ಬರಗಾಲಕ್ಕೆ ತುತ್ತಾಗಿ ಬಯಲು ಸೀಮೆಯ ಪ್ರದೇಶವಾಗಿದ್ದು, ನೈಸರ್ಗಿಕ ವಿಕೋಪವು ನಮ್ಮ ಜಿಲ್ಲೆ ಹಾಗೂ ನಮ್ಮ ತಾಲ್ಲೂಕಿನ ರೈತರ ಬದುಕಿನ ವಿಷಯದಲ್ಲಿ ಕಷ್ಟ ಸಾಧ್ಯವಾದ ಜೀವನವನ್ನು ನಡೆಸುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ದುಡಿಯಲು ಯಾವ ಅವಕಾಶವೂ ಅಂದರೆ ಕೈಗಾರಿಕಾ ವಸಾಹತು ಪ್ರದೇಶ ಇರುವುದಿಲ್ಲ. ಹಾಗೂ ನೀರಾವರಿ ಬೆಳೆ ಬೆಳೆಯಲು ಅವಕಾಶವಿರುವುದಿಲ್ಲ. ರೈತಾಪಿ ವರ್ಗದ ಜನಕ್ಕೆ ವ್ಯವಸಾಯ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ನೈಸರ್ಗಿಕ ವಿಕೋಪದ ಕ್ರೂರ ದೃಷ್ಟಿಯಿಂದ ಅಭಿವೃದ್ಧಿಗೆ ಸಹಕಾರವಾಗಿಲ್ಲ. ಇಂತಹ ಸಂದಿಗ್ಧ ಕಠಿಣ ಪರಿಸ್ಥಿತಿಯಲ್ಲಿ ರಾಜ್ಯದ ಜನತೆಗೆ ಹಣಕಾಸು ವ್ಯವಹಾರವನ್ನು ಪುನಶ್ಚೇತನಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ನೀಡಿರುವ ಹಲವು ಉಚಿತಗಳು (ಗ್ಯಾರಂಟಿ ಯೋಜನೆ) ರಾಜ್ಯದ ಸಾಮಾನ್ಯ ವರ್ಗದ ಜನರು ಜೀವನ ನಡೆಸಲು ಪೂರಕವಾಗಿದೆಯೇ ಹೊರತು ರಾಜ್ಯದ ಆರ್ಥಿಕ ಪುನಶ್ಚೇತನಕ್ಕೆ ಈ ಉಚಿತ ಗ್ಯಾರಂಟಿ ಯೋಜನೆಗಳಿಂದ ಯಾವ ಉಪಯೋಗವನ್ನು ನಾವುಗಳು ಪರಿಗಣಿಸಲು ಅಸಾಧ್ಯ ಎನಿಸಿದೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬ್ಯಾಂಕುಗಳಿಗೆ ಹರಿದು ಬರುತ್ತಿರುವ ಠೇವಣಿಗಳ ಹಣವಾಗಲಿ, ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ರೈತರಿಂದ ವ್ಯವಹಾರ ನಡೆಸಲು ಆಗುತ್ತಿಲ್ಲ. ಇದರಿಂದ ಆರ್ಥಿಕ ಚಟುವಟಿಕೆ ಮೇಲೆ ಸಾಕಷ್ಟು ಪರಿಣಾಮ ಬೀರಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಅಲ್ಲದೆ ಬ್ಯಾಂಕುಗಳಲ್ಲಿ ತೊಡಗಿಸಿರುವ ಠೇವಣಿಯ ಹಣವನ್ನು ಗ್ರಾಹಕರ ಅವಶ್ಯಕತೆಗೆ ತಕ್ಕಂತೆ ಹಿಂಪಡೆಯುವ ದೆಸೆಯಲ್ಲಿ ಸಹಕಾರಿ ಬ್ಯಾಂಕುಗಳು, ರಾಷ್ಟ್ರೀಕೃತ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳಲ್ಲಿನ ಠೇವಣಿ ಪ್ರಮಾಣವು ದಿನದಿಂದ ದಿನಕ್ಕೆ ಕುಸಿಯುತ್ತಿದೆ.

ಬ್ಯಾಂಕುಗಳಿಂದ ಸಾಲ ಪಡೆದ ಸಾಲಗಾರರು ತಮ್ಮ ಹೆಸರಿನ ಮೇಲೆ ಸಾಕಷ್ಟು ಆಸ್ತಿಗಳನ್ನು ಹೊಂದಿದ್ದರೂ ಸಹ ಅವರುಗಳು ಬ್ಯಾಂಕುಗಳಿಂದ ಪಡೆದ ಸಾಲದ ಕಂತು ಬಾಕಿ ಮರುಪಾವತಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುತ್ತಾರೆ ಎಂಬ ಅಂಶವನ್ನು ಪ್ರಸಕ್ತ ಸಾಲಿನಲ್ಲಿ ನಾವು ಕಾಣುತ್ತಿದ್ದೇವೆ. ಸಾಲಗಾರರ ಆಸ್ತಿಗಳ ಮೌಲ್ಯವನ್ನು ಮೌಲ್ಯೀಕರಿಸಿ ಸಾಲ ಪಡೆದ ಸಾಲಗಾರರುಗಳು ಬ್ಯಾಂಕಿನಿಂದ ಸುಲಭವಾಗಿ ಸಾಲ ಪಡೆಯಬಹುದೆಂಬ ಅಂಶವನ್ನು ಮನನ ಮಾಡಿಕೊಂಡು ಬ್ಯಾಂಕುಗಳಿಂದ ಸಾಲವನ್ನು ಪಡೆದಿದ್ದು, ಸಾಲ ಪಡೆದ ಸಾಲಗಾರರು ಬ್ಯಾಂಕುಗಳಿಗೆ ಸಕಾಲದಲ್ಲಿ ಕಂತನ್ನು ಮರುಪಾವತಿಸದೆ "ಉದ್ದೇಶ ಪೂರ್ವಕವಾದ ಸುಸ್ತಿ ಸಾಲಗಾರರು" ಎಂಬುದಾಗಿ ಪರಿಚಯಿಸುವ ವ್ಯವಸ್ಥೆಯನ್ನು ಪ್ರಸಕ್ತ ಸಾಲಿನಲ್ಲಿ ನಾವು ಕಾಣುತ್ತಿದ್ದೇವೆ. ಸಾಲಗಾರರ ಬಳಿ ಸಾಕಷ್ಟು ಮೌಲ್ಯದ ಸ್ವಂತ ಆಸ್ತಿ ಇದ್ದು, ಅವುಗಳನ್ನು ವಿಲೇ ಪಡಿಸುವುದಾಗಲಿ ಅಥವಾ ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲು ಸಾಲಗಾರರು ಸಂಪೂರ್ಣ ವಿಫಲರಾಗಿ ಬ್ಯಾಂಕುಗಳಿಗೆ ಪ್ರಸ್ತುತ ಸಾಲಿನಲ್ಲಿ ಸುಸ್ತಿದಾರರಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಉದ್ದೇಶಿತ ಸುಸ್ತಿಸಾಲಗಾರರು ಬ್ಯಾಂಕುಗಳಿಗೆ ಸಕಾಲದಲ್ಲಿ ಹಣವನ್ನು ಪಾವತಿಸದೆ ಸುಸ್ತಿದಾರರಾಗಿದ್ದು ಈ ಕಾಯ್ದೆಯು (ಮಾಸಿಕ ಎನ್.ಪಿ.ಎ.)ಭಾರತೀಯ ರಿಸರ್ವ್ ಬ್ಯಾಂಕಿನ ಆರ್ಥಿಕ ನೀತಿಗೆ ತದ್ವಿರುದ್ಧ ಕಾಯ್ದೆಯಾಗಿ ಪರಿಣಮಿಸಿದ್ದು, ಬ್ಯಾಂಕಿನ ಆಡಳಿತ ಮಂಡಲಿ ಆಡಳಿತ ನಡೆಸಲು ತುಂಬಾ ಕಷ್ಟಸಾಧ್ಯವೆನಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಕಾನೂನಿನ ಅನ್ವಯ ಸಾಲ ವಸೂಲಾತಿಗೆ ಸಾಕಷ್ಟು ಮಾರ್ಗಗಳಿದ್ದು, ಸಾಲ ವಸೂಲಾತಿಯ ಕ್ರಮ ಜರುಗಿಸುವ ದೆಸೆಯಲ್ಲಿ ನಮ್ಮ ಬ್ಯಾಂಕು ಮುನ್ನಡೆದಿದ್ದು, "ಭ್ರಷ್ಟಾಚಾರ " ಎಂಬ ಅಂಶದಿಂದ ಸಾಲ ವಸೂಲಾತಿಯಲ್ಲಿ ನಾವುಗಳು ಕೂಡ ಹಿನ್ನಡೆಯಲ್ಲಿ ಸಾಗುವ ಪರಿಸ್ಥಿತಿಗೆ ಒದಗಿ ಬಂದಿದ್ದೇವೆ ಎಂಬ ಅಂಶವನ್ನು ತಮ್ಮಗಳ ಗಮನಕ್ಕೆ ತರಲಿಚ್ಛಿಸುತ್ತೇವೆ. ಈ ಕೆಟ್ಟ ಭ್ರಷ್ಟಾಚಾರದಿಂದಾಗಿ ಸಾಲ ಪಡೆದ ಸಾಲಗಾರರು ವಾಮ ಮಾರ್ಗ (ಅನ್ಯ ಮಾರ್ಗ)ದ ಹಾದಿಯನ್ನು ತುಳಿಯುತ್ತಿರುವುದರಿಂದ ಬ್ಯಾಂಕಿನಿಂದ ನೀಡಿದ ಸಾಲವನ್ನು ನಾವುಗಳು ಕಠಿಣ ರೀತಿಯಲ್ಲಿ ವಸೂಲಾತಿ ಕ್ರಮ ಜರುಗಿಸುತ್ತಿದ್ದೇವೆ. ನಮ್ಮ ಬ್ಯಾಂಕಿನ ಸಾಲ ವಸೂಲಾತಿಗಾಗಿ ಕಾನೂನಿನ ಕ್ರಮಕೈಗೊಂಡಿದ್ದೇವೆ. ಆದಾಗ್ಯೂ ಸಾಕಷ್ಟು ಏರಿಳಿತಗಳನ್ನು ಕಂಡುಕೊಳ್ಳುತ್ತಾ ಕರ್ನಾಟಕ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಸುಸ್ತಿ ಸಾಲಗಾರರ ಮೇಲೆ ಸಾಲ ವಸೂಲಾತಿಗಾಗಿ ಮೊಕದ್ದಮೆಗಳನ್ನು ಹೂಡಿ ಸಾಲ ವಸೂಲಾತಿ ಕ್ರಮ ಕೈಗೊಂಡಿದ್ದೇವೆ ಎಂಬ ಅಂಶವನ್ನು ತಮ್ಮಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಮೇಲೆ ಪ್ರಸ್ತಾಪಿಸಿದ ಎಲ್ಲಾ ಅಂಶಗಳನ್ನು ಸಹಕಾರಿ ಬಂಧುಗಳ ಗಮನಕ್ಕೆ ತರಬಯಸುತ್ತಾ ಪ್ರಸಕ್ತ ಸಾಲಿನ ಬ್ಯಾಂಕಿನ ಅಭಿವೃದ್ಧಿಯನ್ನು ಕಂಡುಕೊಂಡಿದ್ದು, ವೈಯಕ್ತಿಕವಾಗಿ ಅಧ್ಯಕ್ಷನಾದ ನನಗೆ ತೃಪ್ತಿ ತಂದಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ವಿವಿಧ ನ್ಯಾಯಾಲಯಗಳಲ್ಲಿರುವ ಸುಸ್ತಿ ಸಾಲ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸುವ ಕ್ರಮಕೈಗೊಂಡು ಬ್ಯಾಂಕಿನ ಸಾಲ ವಸೂಲಾತಿಯನ್ನು ಪ್ರಗತಿದಾಯಕಗೊಳಿಸುವುದಾಗಿ ತಿಳಿಸಲಿಚ್ಛಿಸುತ್ತೇನೆ. ಇದಕ್ಕೆ ನಿಮ್ಮಗಳೆಲ್ಲರ ಸಹಕಾರ, ಆಶೀರ್ವಾದ, ಪ್ರೋತ್ಸಾಹವನ್ನು ನಿರೀಕ್ಷಿಸುತ್ತಾ ನಮ್ಮ ಬ್ಯಾಂಕಿನ ಮುಂಬರುವ ಸಾಲಿನ ಠೇವಣಿ ಸಂಗ್ರಹಣೆಯ, ಸಾಲ ವಸೂಲಾತಿಯ ಕಾರ್ಯ ಚಟುವಟಿಕೆಗಳಿಗೆ ಹೊಸ ಹಾದಿಯನ್ನು ಕಂಡುಕೊಳ್ಳುತ್ತೇನೆ ಎಂಬ ಸಂಪೂರ್ಣ ಭರವಸೆಯೊಂದಿಗೆ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಕಾರ್ಯಕಾರಿ ಮಂಡಲಿ ಪರವಾಗಿ,

(ಹಂಜಿ ಶಿವಸ್ವಾಮಿ)
ಅಧ್ಯಕ್ಷರು

**ಸಹಕಾರಿ ವಂದನೆಗಳು**

## ಬ್ಯಾಂಕಿನ ಇತಿಹಾಸ

ಶ್ರೀ ಸೀತಾರಾಘವ ಸಹಕಾರ ಸಂಘವು 1914ರಲ್ಲಿ ಸ್ಥಾಪನೆಗೊಂಡು ಹಲವಾರು ಏರು-ಇಳಿತಗಳೊಂದಿಗೆ ಸಂಸ್ಥೆಯು 1993ರಲ್ಲಿ ಪುನಶ್ಚೇತನಗೊಂಡು ಐದು ವರ್ಷಗಳ ಕಾಲ ಪತ್ತಿನ ಸಹಕಾರ ಸಂಘವಾಗಿ ವ್ಯವಹಾರದಲ್ಲಿ ತೊಡಗಿಸಿಕೊಂಡು 1998ರಲ್ಲಿ ಸಹಕಾರ ಬ್ಯಾಂಕ್ ಆಗಿ ಪರಿವರ್ತನೆಗೊಂಡು, 2001ರಿಂದ ಸೌಹಾರ್ದ ಸಹಕಾರ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲಿ ಹೆಚ್ಚಿನ ಅವಧಿಯ ಬ್ಯಾಂಕಿಂಗ್ ಸೇವೆ ನೀಡುತ್ತಿರುವ ಬ್ಯಾಂಕ್ ಆಗಿರುತ್ತದೆ, ದಿನಾಂಕ 20-11-2014 ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭವು ಬೆಳಗಾವಿ ನಗರದ ಗಾಂಧಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರಿಂದ "ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ"ಯನ್ನು ಪಡೆಯಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಂತ್ರಣಕ್ಕೆ ಒಳಪಟ್ಟು ಸೌಹಾರ್ದ ಸಹಕಾರ ಬ್ಯಾಂಕ್ ಆಗಿ ಸೇವೆ ಸಲ್ಲಿಸುತ್ತಿದೆ.

## ಶಾಖೆಗಳು

ನಮ್ಮ ಬ್ಯಾಂಕಿನ ಪ್ರಥಮ ಶಾಖೆಯು ಚಿಕ್ಕಮಗಳೂರು ಜಿಲ್ಲೆ ಕಡೂರು ನಗರದಲ್ಲಿ ದಿನಾಂಕ : 20-09-2010ರಂದು ಪ್ರಾರಂಭಗೊಂಡು, ಕಡೂರು ನಗರ ಹಾಗೂ ತಾಲ್ಲೂಕಿನ ಜನತೆಯ ಸಹಕಾರದಿಂದ ಶಾಖೆಯು ವ್ಯವಹಾರ, ವಹಿವಾಟು, ಪ್ರಗತಿದಾಯಕವಾಗಿ ಸಾಗುತ್ತಿದ್ದು, ದಿನಾಂಕ 09-08-2019 ರಂದು ಬ್ಯಾಂಕಿನ ಕಡೂರು ಶಾಖೆಯ ವ್ಯವಹಾರವನ್ನು ಕಡೂರು ನಗರದ ಕೆ.ವಿ. ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಳಿಸಿ ಕೊಂಡಿರುವ ಸುಸಜ್ಜಿತವಾದ ಭವ್ಯ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳ ಆರ್ಥಿಕ ವ್ಯವಹಾರಗಳಿಗೆ ಸ್ಪಂದಿಸಿ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸುತ್ತಾ ಕಾರ್ಯನಿರ್ವಹಿಸುತ್ತಿದೆ.ನಮ್ಮ ಬ್ಯಾಂಕಿನ 2ನೇ ಶಾಖೆಯು ಶಿವಮೊಗ್ಗ ಜಿಲ್ಲೆ ಭದ್ರಾವತಿ ನಗರದಲ್ಲಿ ದಿನಾಂಕ : 28-02-2013ರಂದು ಪ್ರಾರಂಭಗೊಂಡು, ಭದ್ರಾವತಿ ನಗರ ಹಾಗೂ ತಾಲ್ಲೂಕಿನ ಜನತೆಯ ಸಹಾಕಾರದಿಂದ ಶಾಖೆಯ ವ್ಯವಹಾರ ವಹಿವಾಟು ಪ್ರಗತಿದಾಯಕವಾಗಿ ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳ ಆರ್ಥಿಕ ವ್ಯವಹಾರಗಳಿಗೆ ಸ್ಪಂದಿಸಿ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸಲು ಸಹಕರಿಸುತ್ತಿದ್ದಾರೆ ಮತ್ತು ದಿನಾಂಕ 30-05-2019 ರಂದು ಭದ್ರಾವತಿ ನಗರದ ಭೂತನಗುಡಿ ಬಡಾವಣೆಯಲ್ಲಿರುವ ನೂತನ ಕಟ್ಟಡಕ್ಕೆ ಭದ್ರಾವತಿ ಶಾಖೆಯ ವ್ಯವಹಾರವನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ನಮ್ಮ ಬ್ಯಾಂಕಿನ 3ನೇ ಶಾಖೆಯು ಶತಮಾನೋತ್ಸವ ಸ್ಮರಣೀಯ ಶಾಖೆಯಾಗಿ ಬೆಂಗಳೂರು ನಗರದ ರಾಜಾಜಿನಗರ, 6ನೇ ಬ್ಲಾಕ್, ಡಾ॥ ರಾಜ್‌ಕುಮಾರ್ ರಸ್ತೆಯಲ್ಲಿ ಸ್ವಂತ ಕಟ್ಟಡದಲ್ಲಿ ದಿನಾಂಕ 14-09-2016 ರಂದು ಪ್ರಾರಂಭಗೊಂಡಿದ್ದು, ಈ ನೂತನ ಶಾಖೆಯ ವ್ಯವಹಾರ ವಹಿವಾಟು ನಡೆಯಲು ಪ್ರೋತ್ಸಾಹಿಸುತ್ತಿರುವ ಎಲ್ಲಾ ಗ್ರಾಹಕರು ಮತ್ತು ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

## ಸದಸ್ಯತ್ವ

ಬ್ಯಾಂಕಿನ ವರ್ಷದ ಪ್ರಾರಂಭದಲ್ಲಿ ನಮ್ಮ ಬ್ಯಾಂಕಿನ ಸದಸ್ಯರ ಸಂಖ್ಯೆ : 2371 ಇದ್ದು, 2023-24ನೇ ಸಾಲಿನಲ್ಲಿ 201 ಜನ ಸದಸ್ಯರುಗಳು ಹೊಸದಾಗಿ ನೊಂದಣಿಯಾಗಿದ್ದು, 75 ಜನ ಸದಸ್ಯತ್ವವನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ. ವರ್ಷದ ಅಂತ್ಯಕ್ಕೆ ಇದ್ದ ಒಟ್ಟು ಸದಸ್ಯರ ಸಂಖ್ಯೆ : 2497 ಆಗಿರುತ್ತದೆ .

## ಷೇರು ಬಂಡವಾಳ

ವರ್ಷದ ಆರಂಭದಲ್ಲಿ ಷೇರು ಬಂಡವಾಳ ರೂ, 553.49 ಲಕ್ಷಗಳಿದ್ದು, ಈ ವರ್ಷದ ಅಂತ್ಯಕ್ಕೆ ರೂ. 650.74 ಲಕ್ಷಗಳಾಗಿರುತ್ತದೆ.

## ಆಪದ್ದನ ಮತ್ತು ಇತರೆ ನಿಧಿಗಳು

ವರದಿ ಸಾಲಿನ ಆರಂಭದಲ್ಲಿ ಆಪದ್ಧನ ಹಾಗೂ ಇತರೆ ನಿಧಿಯು ರೂ.961.31 ಲಕ್ಷಗಳಿದ್ದು, ಪ್ರಸ್ತುತ ಸಾಲಿನ ಅಂತ್ಯಕ್ಕೆ ರೂ. 1522.27 ಲಕ್ಷಗಳಾಗಿರುತ್ತದೆ. ಕಳೆದ ಸಾಲಿಗಿಂತಲೂ 560.96 ಲಕ್ಷಗಳಷ್ಟು ಹೆಚ್ಚಾಗಿರುತ್ತದೆ. ಈ ನಿಧಿಗಳು ಬ್ಯಾಂಕಿನ ಭದ್ರತೆಯ ಸಂಕೇತವನ್ನು ಬಿಂಬಿಸುತ್ತದೆ.

## ಠೇವಣಿಗಳು

ವರದಿ ಸಾಲಿನಲ್ಲಿ ಬ್ಯಾಂಕು ಠೇವಣಿ ಸಂಗ್ರಹಣೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ವರ್ಷದ ಪ್ರಾರಂಭದಲ್ಲಿ ಬ್ಯಾಂಕಿನ ಠೇವಣಿಯು ರೂ. 16034.43 ಲಕ್ಷಗಳಿದ್ದು, ದಿನಾಂಕ : 31-03-2024ರ ಅಂತ್ಯಕ್ಕೆ ರೂ. 16718.44 ಲಕ್ಷಗಳಾಗಿರುತ್ತದೆ. ಠೇವಣಿ ಸಂಗ್ರಹಣೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ. 4.27 ಉತ್ತಮ ಪ್ರಗತಿಯನ್ನು ಸಾಧಿಸಿದೆ. ಈ ದಿಸೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯು ಹಾಕಿಕೊಂಡ ಗುರಿಯನ್ನು ಸಾಧಿಸುವಲ್ಲಿ ಠೇವಣಿದಾರರು ಬ್ಯಾಂಕಿನ ಮೇಲೆ ಇಟ್ಟಿರುವ ವಿಶ್ವಾಸ, ಅಭಿಮಾನ ಹಾಗೂ ನೀಡಿದ ಸಹಕಾರದಿಂದ ನಿಶ್ಚಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ.

## ಠೇವಣಿ ವಿಮೆ

ಬ್ಯಾಂಕಿನ ಠೇವಣಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣದಲ್ಲಿರುವ ಠೇವಣಿ ವಿಮಾ ನಿಗಮದಲ್ಲಿ ಪ್ರೀಮಿಯಂ ಹಣವನ್ನು ಪಾವತಿಸುತ್ತಿದ್ದು, ಇದರಿಂದ ಠೇವಣಿದಾರರು ತೊಡಗಿಸುವ ಠೇವಣಿಗಳಿಗೆ ಐದು ಲಕ್ಷ ರೂಪಾಯಿಗಳವರೆಗಿನ ವಿಮೆ ಸುರಕ್ಷತೆಯಿರುತ್ತದೆ.

## ದುಡಿಯುವ ಬಂಡವಾಳ

ಕಳೆದ 2022-23ರ ಅಂತ್ಯಕ್ಕೆ ದುಡಿಯುವ ಬಂಡವಾಳವು ರೂ.17549.24 ಲಕ್ಷಗಳಿದ್ದು, ಪ್ರಸ್ತುತ ಸಾಲಿನ ಅಂತ್ಯಕ್ಕೆ ರೂ.18891.45 ಲಕ್ಷಗಳಾಗಿರುತ್ತದೆ. ಶೇ. 7.65 ರಷ್ಟು ಗಮನಾರ್ಹ ಪ್ರಗತಿಯಾಗಿದೆ.

## ಸಾಲ ಮತ್ತು ಮುಂಗಡಗಳು

ಬ್ಯಾಂಕಿನ ಸದಸ್ಯರಿಗೆ ಅವರ ಅಗತ್ಯತೆಗೆ ಹಾಗೂ ನಿಯಮಗಳ ವ್ಯಾಪ್ತಿಯೊಳಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಕಳೆದ 2022–23ರ ಅಂತ್ಯಕ್ಕೆ ಸಾಲ ನೀಡಿಕೆಯು ರೂ. 11161.32 ಲಕ್ಷಗಳಿದ್ದು, ವರದಿ ಸಾಲಿನ ಅಂತ್ಯಕ್ಕೆ ರೂ. 11844.45 ಲಕ್ಷಗಳಾಗಿರುತ್ತದೆ. ಶೇ. 6.12 ರಷ್ಟು ಗಮನಾರ್ಹ ಪ್ರಗತಿಯಾಗಿದೆ.

## ಆದ್ಯತಾ ವಲಯ ಹಾಗೂ ದುರ್ಬಲ ವರ್ಗದ ಸಾಲ

ಜನಸಾಮಾನ್ಯರ ಬಗ್ಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವ ನಮ್ಮ ಬ್ಯಾಂಕ್ ವರದಿ ಸಾಲಿನ ಅಂತ್ಯಕ್ಕೆ ನೀಡಿದ ಒಟ್ಟು ಸಾಲ ರೂ. 11844.45 ಲಕ್ಷಗಳು, ಇದರಲ್ಲಿ ರೂ. 11,003.06 ಲಕ್ಷಗಳ ಸಾಲವನ್ನು ಆದ್ಯತಾ ವಲಯಕ್ಕೆ ನೀಡಿದ್ದು, ಒಟ್ಟು ಸಾಲದ ಶೇ. 97.14% ಆಗಿರುತ್ತದೆ. ದುರ್ಬಲ ವರ್ಗಕ್ಕೆ ರೂ. 1751.42 ಲಕ್ಷಗಳ ಸಾಲ ನೀಡಿದ್ದು, ಮಹಿಳಾ ವರ್ಗಕ್ಕೆ ರೂ. 2015.52 ಲಕ್ಷಗಳ ಸಾಲ ನೀಡಲಾಗಿರುತ್ತದೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗಕ್ಕೆ ರೂ. 255.40 ಲಕ್ಷಗಳು ಸಾಲ ನೀಡಲಾಗಿರುತ್ತದೆ.

## ವಸೂಲಾತಿ

ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಒಟ್ಟಾರೆ ಶ್ರಮಿಸಿದ ಫಲವಾಗಿ ಶೇ. 93.12% ರಷ್ಟು ಸಾಲ ವಸೂಲಾತಿಯಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುತ್ತದೆ. ಸದಸ್ಯರಲ್ಲಿ ಕಳಕಳಿಯ ಮನವಿ ಏನೆಂದರೆ ನಿಮ್ಮ ಸಾಲದ ಅಗತ್ಯಗಳನ್ನು ಪೂರೈಸಲು ಬ್ಯಾಂಕ್ ಸದಾ ಸಿದ್ಧವಾಗಿದೆ. ಆದರೆ ಸಾಲ ಪಡೆದವರು ದಯವಿಟ್ಟು ಯಾವ ಕಾರಣಕ್ಕೂ ಸುಸ್ತಿದಾರರಾಗಬೇಡಿ. ಒಂದು ವೇಳೆ ಸುಸ್ತಿದಾರರಾದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಸಾಲ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವುದು ಬ್ಯಾಂಕಿನ ಹಿತದೃಷ್ಟಿಯಿಂದ ಆದ್ಯ ಕರ್ತವ್ಯವಾಗಿರುತ್ತದೆ. ಸುಸ್ತಿ ಸಾಲಗಳನ್ನು ಕಡಿಮೆ ಮಾಡಲು ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಲಾಗುವುದು.

## ಅನುತ್ಪಾದಕ ಆಸ್ತಿಗಳು (ಎನ್.ಪಿ.ಎ)

ಯಾವುದೇ ಬ್ಯಾಂಕಿನ ಉತ್ತಮ ಸ್ಥಿತಿಯನ್ನು ತಿಳಿಯಲು ಅದರ ಅನುತ್ಪಾದಕ ಆಸ್ತಿಯು ಮಾನದಂಡವಾಗಿದೆ. ಈ ವರ್ಷ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಯು (ಎನ್.ಪಿ.ಎ) ಶೇ. 3.18 ಆಗಿರುತ್ತದೆ. ಆರ್ಥಿಕ ಸಂಕಷ್ಟದ ಸ್ಥಿತಿಯಲ್ಲಿಯೂ ಈ ಸಾಧನೆಗಳಿಸಲು ಪ್ರಮುಖವಾಗಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮ ಪ್ರಮುಖವಾಗಿರುತ್ತದೆ.

## ಹೂಡಿಕೆಗಳು

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಹೂಡಿಕೆಗಳನ್ನು ಮಾಡಲಾಗಿದೆ. ವರದಿ ಸಾಲಿನಲ್ಲಿ ಹೂಡಿಕೆಗಳ ಮೊತ್ತ ರೂ. 4186.99 ಲಕ್ಷಗಳಾಗಿದ್ದು. ಇದರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಭದ್ರತೆಗಳಲ್ಲಿ ರೂ.3791.62 ಲಕ್ಷಗಳು ಹೂಡಿಕೆಯಾಗಿರುತ್ತದೆ. ನಗದು ಮೀಸಲು (ಸಿ.ಆರ್.ಆರ್) ಮತ್ತು ಶಾಸನ ಬದ್ಧ (ಎಸ್.ಎಲ್.ಆರ್) ಗಳನ್ನು ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ನೀತಿ ನಿಯಮದನ್ವಯ ಹೂಡಿಕೆ ಮಾಡಿರುತ್ತದೆ.

## ಲಾಭ ವಿಂಗಡಣೆ

ಪ್ರಸ್ತುತ ವರ್ಷ ಬ್ಯಾಂಕ್ ರೂ. 2,21,20,611.00 ಗಳ ಲಾಭ ಗಳಿಸಿದ್ದು ಇದರಲ್ಲಿ ರೂ. 50,03,802.00 ಗಳಷ್ಟು ಆದಾಯ ತೆರಿಗೆಗೆ ಅವಕಾಶ ಕಲ್ಪಿಸಿದ್ದು, ಡೆಫರ್ ಟ್ಯಾಕ್ಸ್ ರೂ. 2,99,661.00, ಅಮರಟೈಸೇಷನ್‌ಗೆ ರೂ. 10,48,010.00 ಹಾಗೂ ರೂ. 3,00,000.00 ಗಳನ್ನು ಎನ್‌ಪಿಎ ಗೆ ಅವಕಾಶ ಕಲ್ಪಿಸಿ ನಿವ್ವಳ ರೂ. 1,54,69,138.00 ಗಳ ಲಾಭ ಗಳಿಸಿದೆ. ಪ್ರಸ್ತುತ ಸಾಲಿನ ನಿವ್ವಳ ಲಾಭವನ್ನು ಈ ಕೆಳಗಿನಂತೆ ವಿಂಗಡನೆ ಮಾಡಲು ತಮ್ಮಗಳ ಅನುಮೋದನೆ ಕೋರುತ್ತೇನೆ.

| ಕ್ರ.ಸಂ. | ವಿವರ | ಮೊಬಲಗು | ಲಾಭ ಹಂಚಿಕೆಯ ನಂತರದ ನಿಧಿಗಳ ಮೊತ್ತ ದಿನಾಂಕ : 28.06.2024ಕ್ಕೆ ಇದ್ದಂತೆ |
|---|---|---|---|
| 1 | ಮೀಸಲು ನಿಧಿ | 38,67,285.00 | 3,56,71,746.89 |
| 2 | ಸಹಕಾರ ಶಿಕ್ಷಣ ನಿಧಿ | 3,09,383.00 | 3,09,383.00 |
| 3 | ಕಟ್ಟಡ ನಿಧಿ | 15,46,913.00 | 1,74,58,310.73 |
| 4 | ಸಾಮಾನ್ಯ ಕ್ಷೇಮ ನಿಧಿ | 7,73,457.00 | 29,48,491.00 |
| 5 | ಸಿಬ್ಬಂದಿ ಕ್ಷೇಮ ನಿಧಿ | 7,73,457.00 | 21,86,874.00 |
| 6 | ಸದಸ್ಯರುಗಳಿಗೆ ಷೇರು ಡಿವಿಡೆಂಡ್ | 57,49,598.00 | 59,52,946.00 |
| 7 | ಕರಡು ಸಾಲದ ನಿಧಿ (BDDR) | 15,46,913.00 | 4,66,15,007.69 |
| 8 | ಹೂಡಿಕೆ ಏರಿಳಿತದ ನಿಧಿ (IFR) | 9,02,132.24 | 51,79,367.65 |
| | **ಒಟ್ಟು ಮೊತ್ತ ರೂ.** | **1,54,69,138.24** | **11,63,22,126.96** |

ಬ್ಯಾಂಕ್ ಗಳಿಸಿದ ಲಾಭಾಂಶವನ್ನು ಘೋಷಿಸಿದ ದಿನಾಂಕದಿಂದ 3 ವರ್ಷಗಳೊಳಗಾಗಿ ಡಿವಿಡೆಂಡ್‌ನ್ನು ಪಡೆದುಕೊಳ್ಳತಕ್ಕದ್ದು. ನಿಗದಿತ ಅವಧಿಯಲ್ಲಿ ಡಿವಿಡೆಂಡ್ ಪಡೆದುಕೊಳ್ಳದಿದ್ದಲ್ಲಿ ಅಂತಹ ಡಿವಿಡೆಂಡ್ ಮೊಬಲಗನ್ನು ಬ್ಯಾಂಕಿನ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.

## ಲೆಕ್ಕ ಪರಿಶೋಧನೆ

2023–24ನೇ ಸಾಲಿನ ಲೆಕ್ಕಪತ್ರಗಳನ್ನು ಶ್ರೀ ಜಡೇದ್ ಸಿದ್ದಪ್ಪ & ಕೊ. ಚಾರ್ಟರ್ಡ್ ಅಕೌಂಟೆಂಟ್ಸ್, ಶಿವಮೊಗ್ಗ ಇವರಿಂದ ಶಾಸನಬದ್ಧ ಲೆಕ್ಕಪರಿಶೋಧನೆ ಆಗಿದ್ದು, ಬ್ಯಾಂಕ್ 'ಎ' ವರ್ಗದ ಆಡಿಟ್ ಶ್ರೇಣಿಯಲ್ಲಿ ಮುಂದುವರೆದಿರುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ/ ಕನ್‌ಕರೆಂಟ್ ಆಡಿಟ್ ಕಾರ್ಯವನ್ನು ಶ್ರೀ ಬಸವರಾಜ್ ಆಂಡ್ ದಿಲೀಪ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರು ನಿರ್ವಹಿಸಿರುತ್ತಾರೆ.

## ಪರಿವೀಕ್ಷಣೆ

ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ದಿನಾಂಕ:31–03–2022ರ ವರೆಗಿನ ಲೆಕ್ಕಪತ್ರಗಳನ್ನು ಪರಿಶೀಲಿಸಿದ್ದು ಉತ್ತಮ ಕಾರ್ಯನಿರ್ವಹಣೆಯನ್ನು ಮನಗಂಡು ನಮ್ಮ ಬ್ಯಾಂಕನ್ನು ಉತ್ತಮ ಶ್ರೇಣಿಯೆಂದು ಪರಿಗಣಿಸಿರುತ್ತಾರೆಂದು ತಿಳಿಸಲು ಹರ್ಷವೆನಿಸುತ್ತಿದೆ.

## ನಿರ್ದೇಶಕರ ಮಂಡಳಿ ಸಭೆಗಳು

ಆಡಳಿತ ಮಂಡಲಿ ನಿಯಮಿತವಾಗಿ ಪ್ರತಿ ಮಾಸಿಕ ಸಭೆ ಸೇರಿ ಪ್ರಸ್ತುತ ವಾರ್ಷಿಕದಲ್ಲಿ 12 ಸಭೆಗಳನ್ನು ನಡೆಸಿರುತ್ತದೆ. ಬ್ಯಾಂಕಿನ ಕಾರ್ಯಕಲಾಪಗಳು ಸುಗಮವಾಗಿ ನಡೆಸಲು ತಮ್ಮ ಅನುಭವ ಹಾಗೂ ಸಮಯವನ್ನು ಎಲ್ಲ ನಿರ್ದೇಶಕರು ನೀಡಿದ್ದಾರೆ. ಈ ಅವಧಿಯಲ್ಲಿ ನಮ್ಮೊಂದಿಗೆ ಆಡಳಿತ ಮಂಡಲಿಯ ಸಭೆಗಳಲ್ಲಿ ತಮ್ಮ ಉತ್ತಮ ಸಲಹೆಗಳು ಹಾಗೂ ಸೂಚನೆಗಳನ್ನು ನೀಡುತ್ತಿರುವ, ಶ್ರೀ ಎಸ್. ಮೋಹನ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಬ್ಯಾಂಕಿಂಗ್ ವಿಷಯದಲ್ಲಿ ಅನುಭವಿಗಳಾದ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾದ ಶ್ರೀಮತಿ ನಾಗಲಾಂಬಿಕಾ ಕಲ್ಮತ್ ನಿವೃತ್ತ ಬ್ಯಾಂಕ್ ವ್ಯವಸ್ಥಾಪಕರವರಿಗೂ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಎಲ್ಲಾ ನಿರ್ದೇಶಕರುಗಳಿಗೂ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು.

## ಉಪ ಸಮಿತಿಗಳು

1) ಬ್ಯಾಂಕ್ ಕಾರ್ಯನಿರ್ವಹಣಾ ಸಮಿತಿ–04, ಲೆಕ್ಕ ಪರಿವೀಕ್ಷಣಾ ಸಮಿತಿ–12, ಸಾಲ ಮಂಜೂರಾತಿ ಸಮಿತಿ–05, ಹೂಡಿಕೆ ಸಮಿತಿ–01 ಮತ್ತು ಆಲ್ಕೋ ಕಮಿಟಿ–04, ವಿಶೇಷ ಸಮಿತಿ–02 ಸಭೆಗಳನ್ನು ನಡೆಸಿ ಬ್ಯಾಂಕಿನ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿರುತ್ತದೆ. ಆಂತರಿಕ ಲೆಕ್ಕ ಪರಿಶೋಧನೆ ವಿವರಗಳನ್ನು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿರುತ್ತದೆ. ಇದೇ ರೀತಿ ಪ್ರಸ್ತುತ ಸಾಲಿನಲ್ಲಿ ಮಂಜೂರಾತಿ ಸಮಿತಿ ಸಭೆಗಳನ್ನು ನಡೆಸಿ ಸಾಲಗಳನ್ನು ಶೀಘ್ರವಾಗಿ ವಿತರಿಸುವ ಕ್ರಮ ಕೈಗೊಳ್ಳಲಾಗಿರುತ್ತದೆ ಮತ್ತು ಆಲ್ಕೋ ಕಮಿಟಿಯ ಸಭೆಗಳನ್ನು ನಡೆಸಿ ಬ್ಯಾಂಕಿನ ನಿಧಿಗಳ ಲಭ್ಯತೆಗೆ ಅನುಗುಣವಾಗಿ ಹೂಡಿಕೆಗಳಲ್ಲಿ ವಿನಿಯೋಗಿಸುವ ಬಗ್ಗೆ ಸಕಾಲದಲ್ಲಿ ಸೂಕ್ತ ನಿರ್ಣಯ ಕೈಗೊಂಡು ನಿಧಿಗಳ ಬಗ್ಗೆ ನಿರ್ವಹಣೆ ಕಾರ್ಯ ಕೈಗೊಂಡಿರುತ್ತದೆ ಹಾಗೂ ವಿಶೇಶ ಸಮಿತಿ ಸಭೆಗಳನ್ನು ನಡೆಸಿ ನಿರ್ಣಯ ಕೈಗೊಂಡಿರುತ್ತೇವೆ. ಮತ್ತು ಕಾರ್ಯನಿರ್ವಹಣಾ ಸಮಿತಿಯ ಸಭೆಯಲ್ಲಿ ಶ್ರೀ ನಾಗಲಾಂಬಿಕ ಕಲ್ಮತ್ ನಿವೃತ್ತ ಹಿರಿಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಶ್ರೀ ರಮೇಶ್.ಪಿ.ವಿ ನಿವೃತ್ತ ಹಿರಿಯ ವ್ಯವಸ್ಥಾಪಕರು, ಐಎನ್‌ಜಿ ವೈಶ್ಯ ಬ್ಯಾಂಕ್ ಇವರು ತಮ್ಮ ಸಲಹೆ ಮಾರ್ಗದರ್ಶನ ನೀಡಿ ಬ್ಯಾಂಕಿನ ಅಭಿವೃದ್ಧಿಗೆ ಪೂರಕವಾದ ನಿರ್ಣಯಗಳನ್ನು ಕೈಗೊಂಡಿರುತ್ತಾರೆ.

## ಸಾಮಾಜಿಕ ಹಾಗೂ ಇತರೆ ಚಟುವಟಿಕೆಗಳು

ನಮ್ಮ ಸಂಸ್ಥೆಯು ಸಹಕಾರ ಬ್ಯಾಂಕ್ ಆಗಿ ಪರಿವರ್ತನೆಗೊಂಡು 25 ವರ್ಷಗಳಾಗಿದ್ದು, ಪ್ರಸ್ತುತ 26 ನೇ ವರ್ಷದ ವಾರ್ಷಿಕ ಮಹಾ ಸಭೆಯನ್ನು ಆಚರಿಸುತ್ತಿದ್ದೇವೆ. ಬ್ಯಾಂಕಿನ ಸದಸ್ಯರ ಹಾಗೂ ಸಾರ್ವಜನಿಕರ ಅಗತ್ಯವಾದ ನೀರಿನ ಸರಬರಾಜಿನ ಉಪಯೋಗಕ್ಕಾಗಿ ಉಚಿತವಾಗಿ ನೀರಿನ ಟ್ಯಾಂಕರ್‌ನ ಸೌಲಭ್ಯ ನೀಡುತ್ತಿದ್ದೇವೆ.

# ಕೃತಜ್ಞತೆಗಳು ಹಾಗೂ ಅಭಿನಂದನೆಗಳು







ನಮ್ಮ ಬ್ಯಾಂಕ್ ಯಶಸ್ಸು ಗಳಿಸುತ್ತಾ ಸಾಗಿದ್ದು, ನಮ್ಮ ಜಿಲ್ಲೆಯ ಗಮನವನ್ನು ಸೆಳೆದು ನೆರೆ ಜಿಲ್ಲೆಗಳಾದ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿ ಮುನ್ನಡೆಯಲು ಹಲವು ರೀತಿಯಲ್ಲಿ ನಮ್ಮೊಂದಿಗೆ ಸಹಕರಿಸಿದವರಿಗೆ ಈ ಸಂದರ್ಭದಲ್ಲಿ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿ ವರ್ಗದವರಿಗೆ, ರಾಷ್ಟ್ರೀಯ/ರಾಜ್ಯ ಫೆಡರೇಷನ್, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಜಿಲ್ಲಾ ಸಹಕಾರಿ, ಜಿಲ್ಲಾ ಸಹಕಾರಿ ಯೂನಿಯನ್‌ನ ಅಧಿಕಾರಿಗಳು, ಸಹಕಾರ ಸಂಘಗಳ ಇಲಾಖಾ ಅಧಿಕಾರಿಗಳು, ಸ್ಥಳೀಯ ಬ್ಯಾಂಕುಗಳ ವ್ಯವಸ್ಥಾಪಕರು, ಸ್ಥಳೀಯ ಸಹಕಾರ ಸಂಘಗಳು ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಜಡೇದ್ ಸಿದ್ದಪ್ಪ & ಕೊ. ಹಾಗೂ ಶ್ರೀ ಬಸವರಾಜ್ ಅಂಡ್ ದಿಲೀಪ್‌ರವರಿಗೂ ಸಹ ಹೃತ್ಪೂರ್ವಕವಾದ ಅಭಿನಂದನೆಗಳು.

ನಮಗೆ ಕಾಲಕಾಲಕ್ಕೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನಗಳನ್ನು ನೀಡುತ್ತಾ ಬಂದಿರುವ ಇಲಾಖಾಧಿಕಾರಿಗಳಿಗೆ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರಿಗೂ ಹಾಗೂ ಸಿಬ್ಬಂದಿಯವರಿಗೂ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಮ್ಮೆಲ್ಲಾ ಕಾರ್ಯಗಳಲ್ಲಿ, ತಮ್ಮಗಳ ಸಂಪೂರ್ಣ ಸಹಕಾರ ಹಾಗೂ ಒಮ್ಮತ ನಿರ್ಣಯಗಳನ್ನು ನೀಡಿ ಬ್ಯಾಂಕಿನ ಅಭಿವೃದ್ಧಿಯೇ, ತಮ್ಮ ಅಭಿವೃದ್ಧಿ ಎಂದು ಕಾಣುತ್ತಾ ಕಾರ್ಯಗಳನ್ನು ಮಾಡುತ್ತಿರುವ ಬ್ಯಾಂಕಿನ ಆಡಳಿತ ಮಂಡಲಿಯ ನನ್ನ ಮಿತ್ರರು ಹಾಗೂ ಯಾವುದೇ ಸಂದರ್ಭದಲ್ಲಿ ಬೇಸರಿಸದೇ ಸದಾ ನಗುಮುಖದ ಸೇವೆ ನೀಡುತ್ತಾ ಬರುತ್ತಿರುವ ಎಲ್ಲಾ ಸಿಬ್ಬಂದಿಯವರಿಗೆ ವಿಶೇಷವಾದ ಅಭಿನಂದನೆಗಳು.

ನಮ್ಮ ಬ್ಯಾಂಕಿನ ಸದಸ್ಯರು ಹಾಗೂ ಗ್ರಾಹಕರ ಅನುಕೂಲಕ್ಕಾಗಿ ಆರ್.ಟಿ.ಜಿ.ಎಸ್., ಎನ್.ಇ.ಎಫ್.ಟಿ. ಸೌಲಭ್ಯ ಕಲ್ಪಿಸಿಕೊಟ್ಟಿರುವ ಚಿತ್ರದುರ್ಗ ಶಾಖೆಯ ಆಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಅಧಿಕಾರಿ ವರ್ಗದವರಿಗೂ ಮತ್ತು ಕಡೂರು ಶಾಖೆಯ ಆಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕರಿಗೆ ಹಾಗೂ ಅಧಿಕಾರಿ ವರ್ಗದವರಿಗೆ, ಭದ್ರಾವತಿ ಹಾಗೂ ಬೆಂಗಳೂರು ಶಾಖೆಯ ಆಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಅಧಿಕಾರಿ ವರ್ಗದವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಮುಖ್ಯವಾಗಿ ನಮ್ಮ ಬ್ಯಾಂಕ್‌ನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಿರುವ ಬ್ಯಾಂಕಿನ ಗ್ರಾಹಕರಿಗೆ, ಸದಸ್ಯರುಗಳಿಗೆ ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಮತ್ತು ನಮ್ಮ ಬ್ಯಾಂಕಿನ ಶಾಖೆಯು ಚಿಕ್ಕಮಗಳೂರು ಜಿಲ್ಲೆ, ಕಡೂರು ನಗರದಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆ ಭದ್ರಾವತಿಯಲ್ಲಿ ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿ ಪ್ರಾರಂಭಗೊಂಡು, ಈ ಶಾಖೆಗಳು ಉತ್ತಮ ಪ್ರಗತಿ ಹೊಂದುತ್ತಿರಲು ಸಹಕರಿಸುತ್ತಿರುವ ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ತಮ್ಮೆಲ್ಲರ ಪ್ರೋತ್ಸಾಹ ನಮ್ಮ ಮೇಲೆ ಸದಾಕಾಲ ಇರಲಿ ಎಂದು ಆಶಿಸಿ, ವಿನಯಪೂರ್ವಕವಾಗಿ ವಂದಿಸಿ, ನನ್ನ ವರದಿಯನ್ನು ಪೂರ್ಣಗೊಳಿಸುತ್ತೇನೆ.

**ಕಾರ್ಯಕಾರಿ ಮಂಡಲಿ ಪರವಾಗಿ,**

**ಸಹಕಾರಿ ವಂದನೆಗಳು**

**(ಹಂಜಿ ಶಿವಸ್ವಾಮಿ),**
**ಅಧ್ಯಕ್ಷರು**

# 2024-25ನೇ ಸಾಲಿನ ಅಂದಾಜು ಆಯ-ವ್ಯಯದ ಪಟ್ಟಿ.

| ಕ್ರ.ಸಂ. | ವಿವರ | 2024-25 | |
|---|---|---|---|
| | | ಆದಾಯ | ಖರ್ಚು |
| 1 | ಬಡ್ಡಿ, ಸುಸ್ತಿಬಡ್ಡಿ, ಬ್ಯಾಂಕಿನ ವ್ಯವಹಾರದಿಂದ ಬರಬಹುದಾದ ಆದಾಯ | 162000000.00 | 105000000.00 |
| 2 | ಹೂಡಿಕೆ ಮೇಲೆ ಬರಬಹುದಾದ ಬಡ್ಡಿ | 3500000.00 | 0.00 |
| 3 | ಸರ್ಕಾರಿ ಭದ್ರತೆಗಳಿಂದ ಬರಬಹುದಾದ ಆದಾಯ | 28000000.00 | 0.00 |
| 4 | ಲಾಕರ್ ಬಾಡಿಗೆ | 700000.00 | 0.00 |
| 5 | ಬ್ಯಾಂಕ್ ಚಾರ್ಜಸ್ | 0.00 | 50000.00 |
| 6 | ಪಿಗ್ಮಿ ಕಮಿಷನ್ | 0.00 | 4000000.00 |
| 7 | ವಾಹನ ನಿರ್ವಹಣಾ ವೆಚ್ಚ | 0.00 | 625000.00 |
| 8 | ಠೇವಣಿ ಮೇಲಿನ ವಿಮೆ | 0.00 | 2200000.00 |
| 9 | ಕಛೇರಿ ವಿಮೆ | 0.00 | 300000.00 |
| 10 | ವಾಹನ ವಿಮೆ | 0.00 | 100000.00 |
| 11 | ಬ್ಯಾಂಕಿನ ವೃತ್ತಿ ತೆರಿಗೆ | 0.00 | 10000.00 |
| 12 | ವ್ಯವಹಾರಾಭಿವೃದ್ಧಿಗಾಗಿ ಖರ್ಚು | 0.00 | 3000000.00 |
| 13 | ಸಿಬ್ಬಂದಿ ಸಂಬಳ, ಭವಿಷ್ಯನಿಧಿ, ವ್ಯದ್ಯಕೀಯ ಭತ್ಯೆ, ಗ್ರಾಚ್ಯುಯಿಟಿ, ಬೋನಸ್ / ಎಕ್ಸ್‌ಗ್ರೇಷಿಯಾ | 0.00 | 32000000.00 |
| 14 | ಮುದ್ರಣ ಮತ್ತು ಲೇಖನ | 0.00 | 500000.00 |
| 15 | ದೂರವಾಣಿ ಶುಲ್ಕ | 0.00 | 800000.00 |
| 16 | ನಿರ್ದೇಶಕ ಮಂಡಲಿ & ಕಾರ್ಯನಿರ್ವಹಣಾ ಸಮಿತಿಯ (BOM) ಸಿಟ್ಟಿಂಗ್ ಫೀ | 0.00 | 800000.00 |
| 17 | ವ್ಯವಸ್ಥಾಪಕ ನಿರ್ದೇಶಕರ ಸಂಭಾವನೆ | 0.00 | 960000.00 |
| 18 | ಮಾಸಿಕ ಸಭಾ ಖರ್ಚು | 0.00 | 100000.00 |
| 19 | ಕಾನೂನು ಸಲಹಾ/ವೃತ್ತಿ ಶುಲ್ಕ | 0.00 | 200000.00 |
| 20 | ವಿದ್ಯುಚ್ಛಕ್ತಿ ಬಿಲ್ಲು | 0.00 | 1200000.00 |
| 21 | ಪತ್ರಿಕೆ ಮತ್ತು ನಿಯತಕಾಲಿಕೆಗಳು | 0.00 | 100000.00 |
| 22 | ಪ್ರಯಾಣ ಭತ್ಯೆ & ದಿನಭತ್ಯೆ | 0.00 | 300000.00 |
| 23 | ಸಿಬ್ಬಂದಿ & ಕಾರ್ಯಕಾರಿ ಮಂಡಲಿಯ ತರಬೇತಿ ಹಾಗೂ ಅಧ್ಯಯನದ ಖರ್ಚು | 0.00 | 200000.00 |
| 24 | ಅಂಚೆ ವೆಚ್ಚ | 0.00 | 80000.00 |

# 2024-25ನೇ ಸಾಲಿನ ಅಂದಾಜು ಆಯ-ವ್ಯಯದ ಪಟ್ಟಿ.

| ಕ್ರ.ಸಂ. | ವಿವರ | 2024-25 | |
|---|---|---|---|
| | | ಆದಾಯ | ಖರ್ಚು |
| 25 | ವಾರ್ಷಿಕ ಮಹಾಸಭಾ ಖರ್ಚು | 0.00 | 1450000.00 |
| 26 | ಪ್ರಚಾರದ ಖರ್ಚು | 0.00 | 500000.00 |
| 27 | ಕಟ್ಟಡ & ನೀರಿನ ತೆರಿಗೆ & ಇತರೆ ಖರ್ಚುಗಳು | 0.00 | 200000.00 |
| 28 | ವಾರ್ಷಿಕ ನಿರ್ವಹಣಾ ವೆಚ್ಚ | 0.00 | 300000.00 |
| 29 | ರಾಷ್ಟ್ರೀಯ ಫೆಡರೇಷನ್ / ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ / ಸೌಹಾರ್ದ ಸಹಕಾರಿ ನಿ., & ಜಿಲ್ಲಾ ಯೂನಿಯನ್ ಸದಸ್ಯತ್ವ ಶುಲ್ಕ | 0.00 | 150000.00 |
| 30 | ಸಾಮಾನ್ಯ ಖರ್ಚು | 0.00 | 700000.00 |
| 31 | ಕ್ರೀಡಾ & ಸಾಂಸ್ಕೃತಿಕ ಚಟುವಟಿಕೆಗಳ ಖರ್ಚು | 0.00 | 100000.00 |
| 32 | ದಾನ / ವಂತಿಗೆ | 0.00 | 150000.00 |
| 33 | ಲೆಕ್ಕಪರಿಶೋಧನಾ ಶುಲ್ಕ ಮತ್ತು ಲೆಕ್ಕಪರಿಶೋಧಕರ ಖರ್ಚು | 0.00 | 1000000.00 |
| 34 | ರಿಪೇರಿ ಮತ್ತು ನಿರ್ವಹಣೆ | 0.00 | 1600000.00 |
| 35 | ಸವಕಳಿ | 0.00 | 7500000.00 |
| 36 | ಅತಿಥಿ ಸತ್ಕಾರದ ಖರ್ಚು | 0.00 | 700000.00 |
| 37 | ಸಿಬ್ಬಂದಿ ಸಮವಸ್ತ್ರ | 0.00 | 150000.00 |
| 38 | ಆದಾಯ ತೆರಿಗೆ | 0.00 | 6000000.00 |
| 39 | ಅಮರ್‌ಟೈಸೇಷನ್ | 0.00 | 1100000.00 |
| 40 | ಗೋದಾಮು ಬಾಡಿಗೆ | 0.00 | 75000.00 |
| 41 | ಎ.ಟಿ.ಎಂ. ನಿರ್ವಹಣಾ ವೆಚ್ಚ | 0.00 | 400000.00 |
| 42 | ಅನುತ್ಪಾದಕ ಆಸ್ತಿ ಅವಕಾಶ (ಎನ್.ಪಿ.ಎ.) | 0.00 | 2500000.00 |
| 43 | ಲಾಭಾಂಶ | 0.00 | 17100000.00 |
| | **ಒಟ್ಟು ಮೊತ್ತ** | **194200000.00** | **194200000.00** |

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ ಇದರ ಪರವಾಗಿ

(ಎನ್. ಮಂಜುನಾಥ)
ಪ್ರಧಾನ ವ್ಯವಸ್ಥಾಪಕರು



**M/S JADED SIDDAPPA & CO.**
Chartered Accountants
Daraga Commplex, No-6, 1st Floor, Tilknagar Main Road, Shivamogga-577201,
Phone office 08182 2719797 | Mobile: 9448127197, Email:jadedsiddappa@gmail.com

# ಲೆಕ್ಕ ಪರಿಶೋಧಕರ ವರದಿ

ಸದಸ್ಯರು,
**ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ,**
**ಹೊಸದುರ್ಗ** ಇವರಿಗೆ,

ನಾವು ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ, ಹೊಸದುರ್ಗ, ಇದರ 31 ಮಾರ್ಚ್, 2024 ರಲ್ಲಿದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆಯನ್ನು ಮತ್ತು ಮೇಲ್ಕಂಡ ದಿನಾಂಕಕ್ಕೆ ಅಂತ್ಯಗೊಳ್ಳುವ ಆರ್ಥಿಕ ವರ್ಷದ ಜಮಾ ಮತ್ತು ಖರ್ಚು ತಃಖ್ತೆಯನ್ನು ಪರಿಶೋಧಿಸಿರುತ್ತೇವೆ. ಈ ಆರ್ಥಿಕ ವಿವರಣೆಗಳು ಸಹಕಾರಿಯ ಆಡಳಿತ ಮಂಡಲಿಯ ಜವಾಬ್ದಾರಿಯಾಗಿರುತ್ತದೆ. ಲೆಕ್ಕ ಪರಿಶೋಧನೆಯ ಆಧಾರದಲ್ಲಿ ಸಹಕಾರಿಯ ಆರ್ಥಿಕ ತ:ಖ್ತೆಗಳ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ಪ್ರಸಕ್ತ ನಮ್ಮ ದೇಶದಲ್ಲಿ ಪ್ರಚಲಿತವಿರುವ ಲೆಕ್ಕ ಪರಿಶೋಧನಾ ಮಾನದಂಡಗಳಿಗನುಗುಣವಾಗಿ ನಾವು ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಸದರಿ ಮಾನದಂಡಗಳು ಸಹಕಾರಿಯ ಆರ್ಥಿಕ ತಃಖ್ತೆಗಳು ಮಹತ್ವದ ತಪ್ಪು ವಿವರಣೆಗಳಿಂದ ಮುಕ್ತವಾಗಿವೆ ಎಂಬ ಸಮಂಜಸ ಭರವಸೆಯನ್ನು ಹೊಂದುವಂತೆ ನಾವು ಲೆಕ್ಕ ಪರಿಶೋಧನೆಯನ್ನು ಯೋಜಿಸಿ ನಿರ್ವಹಿಸಲು ಅಪೇಕ್ಷಿಸುತ್ತವೆ. ಲೆಕ್ಕ ಪರಿಶೋಧನೆಯು ಆರ್ಥಿಕ ಅಂಶಗಳನ್ನು ಸಮರ್ಥಿಸುವ ಪುರಾವೆಗಳ ಪರೀಕ್ಷಾರ್ಥ ಪರಿಶೀಲನೆಯನ್ನು ಒಳಗೊಂಡಿರುತ್ತದೆ. ಮತ್ತು ಲೇಖಾನುದಾನ ತತ್ವಗಳು ಮತ್ತು ಆಡಳಿತ ಮಂಡಳಿಯವರು ಕೈಗೊಂಡ ಮಹತ್ವದ ನಿರ್ಧಾರಗಳು ಸೇರಿದಂತೆ ಆರ್ಥಿಕ ವರದಿಗಳ ಸಮಗ್ರ ಮೌಲೀಕರಣವನ್ನು ಒಳಗೊಂಡಿರುತ್ತದೆ. ನಮ್ಮ ಲೆಕ್ಕ ಪರಿಶೋಧನೆಯು ನಮ್ಮ ಅಭಿಪ್ರಾಯಗಳಿಗೆ ಸೂಕ್ತವಾದ ಆಧಾರಗಳನ್ನು ಒದಗಿಸುತ್ತದೆಂದು ನಾವು ನಂಬುತ್ತೇವೆ.

ಸಹಕಾರಿಯ ಲೆಕ್ಕಪತ್ರಗಳನ್ನು ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ 1997, ಇದರ ನಿಯಮಾವಳಿಗಳಿಗೆ ಅನುಗುಣವಾಗಿ ನಿರ್ವಹಿಸಲಾಗಿದೆ. ಹಾಗೂ ಇವು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕೃತವಾದ ನಿಯಮಾವಳಿಗಳಿಗೆ ಅನುಗುಣವಾಗಿರುತ್ತವೆ.

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ಸಮಜಾಯಿಷಿಗಳ ಆಧಾರದ ಮೇರೆಗೆ ಈ ರೀತಿ ವರದಿ ಮಾಡುತ್ತಿದ್ದೇವೆ.

1. ನಾವು ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ನಮ್ಮ ಬಹುಮಟ್ಟಿನ ತಿಳುವಳಿಕೆ ಮತ್ತು ನಂಬಿಕೆ ಮೇರೆಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಪಡೆದಿರುತ್ತೇವೆ.
2. ನಮ್ಮ ಅಭಿಪ್ರಾಯದಂತೆ ಸಹಕಾರಿಯು ಲೆಕ್ಕ ಪತ್ರಗಳನ್ನು ಕಾನೂನಿನ್ವಯ ಇರಿಸಿರುತ್ತದೆಂದು ನಮ್ಮ ಪರಿಶೀಲನೆಯಿಂದ ತಿಳಿದುಬಂದಿರುತ್ತದೆ.
3. ಈ ವರದಿಯಲ್ಲಿ ತಿಳಿಸಿರುವಂತೆ ಜಮಾ ಮತ್ತು ಖರ್ಚು ತಃಖ್ತೆಯು ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯು ಸಹಕಾರಿಯ ಲೆಕ್ಕ ಪತ್ರಗಳಿಗೆ ಮತ್ತು ವರದಿಗೆ ತಾಳೆಯಾಗುತ್ತದೆ.
4. ನಮ್ಮ ಗಮನಕ್ಕೆ ಬಂದಿರುವಂತೆ ಸಹಕಾರಿಯ ವ್ಯವಹಾರವು ಸಹಕಾರಿಯ ಸಾಮರ್ಥ್ಯದ ವ್ಯಾಪ್ತಿಯಲ್ಲಿದೆ.
5. **ಗಮನಕ್ಕೆ :**

   ಲೆಕ್ಕ ಪತ್ರಗಳ ಮತ್ತು ಟೀಕೆ ಹಾಗೂ ಅವಲೋಕನಗಳ ಟಿಪ್ಪಣಿಯ ಅಂಶ ಲೆಕ್ಕ ಪರಿಶೋಧನೆಯ ದಸ್ತಾವೇಜಿನಲ್ಲಿ ಸೇರಿದೆ. ನಮ್ಮ ಅಭಿಪ್ರಾಯ ಮತ್ತು ನಮಗೆ ನೀಡಿದ ಮಾಹಿತಿಯ ಆಧಾರದನ್ವಯ ಮೇಲೆ ತಿಳಿಸಿದ ಲೆಕ್ಕ ಪತ್ರಗಳು, ಟಿಪ್ಪಣಿಗಳು, ಸತ್ಯವೂ ಮತ್ತು ನೈಜವೂ ಆಗಿವೆ.

ಎ) ಆಸ್ತಿ ಜವಾಬ್ದಾರಿ ತಃಖ್ತೆಯು ದಿನಾಂಕ 31 ಮಾರ್ಚ್, 2024ಕ್ಕೆ ಇದ್ದಂತೆ ಸಂಯುಕ್ತ ಸಹಕಾರಿಯ ವಾಸ್ತವ ಸ್ಥಿತಿಯಾಗಿದೆ.

ಬಿ) ಆದಾಯ ಮತ್ತು ವೆಚ್ಚಕ್ಕೆ ಸಂಬಂಧಿಸಿದಂತೆ, ಬ್ಯಾಂಕಿನ ಆದಾಯವು ವರ್ಷಾಂತ್ಯಕ್ಕೆ ವೆಚ್ಚಕ್ಕೆ ಮೀರಿದ ಆದಾಯವಾಗಿದೆ.

**ದಿನಾಂಕ: 16.06.2024**

**ಸ್ಥಳ: ಹೊಸದುರ್ಗ**

ಇಂದಾ:-ಜಡೇದ್ ಸಿದ್ದಪ್ಪ ಅಂಡ್ ಕೋ,
ಚಾರ್ಟರ್ಡ್ ಅಕೌಂಟೆಂಟ್ಸ್
ಫರ್ಮ್ ಸಂಖ್ಯೆ001191
ಜಡೇದ್ ಸಿದ್ದಪ್ಪ ಮೆ.ನಂ. 024285

**ಎಂಪಾನಲ್‌ಮೆಂಟ್ ನಂಬರ್: F-28/03/2017-15:48:22**

# ಇದರ 2023-24 ನೇ ಸಾಲಿನ ಲಾಭ-ನಷ್ಟದ ತಃಖ್ತೆ.

| ದಿನಾಂಕ : 31.03.2023ಕ್ಕೆ ಇದ್ದಂತೆ | ಆದಾಯ | ದಿನಾಂಕ : 31.03.2024ಕ್ಕೆ ಇದ್ದಂತೆ |
|---|---|---|
| 16,80,96,182.00 | ಸಾಲಗಳಿಂದ ಬಂದ ಬಡ್ಡಿ | 17,57,46,805.00 |
| 69,69,966.00 | ಇತರೆ ಆದಾಯ | 64,52,171.00 |
| 17,50,66,148.00 | ಒಟ್ಟು ಮೊತ್ತ | 18,21,98,976.00 |
| | ಖರ್ಚು | |
| 9,28,97,174.00 | ನೀಡಿದ ಬಡ್ಡಿ | 10,46,85,308.00 |
| 5,15,36,432.00 | ಕಾರ್ಯಾಚರಣೆ ವೆಚ್ಚಗಳು | 5,53,93,057.00 |
| 1,59,51,601.00 | ಅವಕಾಶಗಳು & ಆಕಸ್ಮಿಕ ಅವಕಾಶಗಳು | 66,51,473.00 |
| 14,44,33,606.00 | ಒಟ್ಟು ಮೊತ್ತ | 16,00,78,365.00 |
| | ಲಾಭ/ನಷ್ಟ | |
| 1,46,80,941.00 | ನಿವ್ವಳ ಲಾಭ / ನಷ್ಟ ಚಾಲ್ತಿ ಸಾಲಿಗೆ | 1,54,69,138.00 |
| | ಲಾಭ/ನಷ್ಟ ಮುಂದೆ ತಂದಿದ್ದು | |
| 17,50,66,148.00 | ಒಟ್ಟು ಮೊತ್ತ | 18,21,98,976.00 |

ದಿನಾಂಕ : 16-06-2024
ಸ್ಥಳ : ಹೊಸದುರ್ಗ

ಇಂದಾ:-ಜಡೇದ್ ಸಿದ್ದಪ್ಪ ಅಂಡ್ ಕೋ,
ಚಾರ್ಟರ್ಡ್ ಅಕೌಂಟೆಂಟ್ಸ್
ಫರ್ಮ್ ಸಂಖ್ಯೆ001191

(ಹಂಜಿ ಶಿವಸ್ವಾಮಿ) ಅಧ್ಯಕ್ಷರು | (ಡಿ. ಆದಿರಾಜಯ್ಯ) ಉಪಾಧ್ಯಕ್ಷರು | (ಬಿ.ವಿ. ಕುಶಕುಮಾರ) ನಿರ್ದೇಶಕರು | (ಓ. ನಾಗೇಂದ್ರಯ್ಯ) ನಿರ್ದೇಶಕರು | (ಎನ್. ಮಂಜುನಾಥ) ಪ್ರಧಾನ ವ್ಯವಸ್ಥಾಪಕರು | ಜಡೇದ್ ಸಿದ್ದಪ್ಪ ಮೆ.ನಂ. 024285

## ಇದರ ಆಸ್ತಿ-ಜವಾಬ್ದಾರಿ ತಃಖ್ತೆ ದಿನಾಂಕ: 31.03.2024 ಕ್ಕೆ ಇದ್ದಂತೆ

| ದಿನಾಂಕ : 31.03.2023ಕ್ಕೆ ಇದ್ದಂತೆ | ಬಂಡವಾಳ ಮತ್ತು ಹೊಣೆಗಾರಿಕೆಗಳು | ಅನುಬಂಧ | ದಿನಾಂಕ : 31.03.2024ಕ್ಕೆ ಇದ್ದಂತೆ |
|---|---|---|---|
| 5,53,50,000.00 | ಷೇರು ಬಂಡವಾಳ | 1 | 6,50,73,500.00 |
| 9,61,31,429.00 | ಆಪದ್ಧನ ಮತ್ತು ಇತರೆ ನಿಧಿಗಳು | 2 | 15,22,27,781.00 |
| 160,34,43,026.00 | ಠೇವಣಾತಿಗಳು | 4 | 167,18,43,959.00 |
| 0.00 | ಪಡೆದಿರುವ ಸಾಲಗಳು | 5 | 0.00 |
| 2,25,61,113.00 | ಬರತಕ್ಕ ಸುಸ್ತಿ ಬಡ್ಡಿ | 8 | 2,60,32,411.00 |
| 1,32,35,200.00 | ಪಾವತಿಸಬೇಕಾದ ಬಡ್ಡಿ | 9 | 1,19,07,160.00 |
| 2,07,31,464.00 | ಇತರೆ ಹೊಣೆಗಾರಿಕೆಗಳು | 10 | 1,93,28,362.00 |
| 1,46,80,941.00 | ಲಾಭಾಂಶ | 11 | 1,54,69,138.00 |
| **182,61,33,172.00** | **ಒಟ್ಟು ಮೊತ್ತ** | | **196,18,82,311.00** |
| | **ಸ್ವತ್ತು ಮತ್ತು ಆಸ್ತಿ** | | |
| 4,36,86,615.00 | ನಗದು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಶಿಲ್ಕು | 1 | 3,01,31,195.00 |
| 16,33,36,177.00 | ಬ್ಯಾಂಕುಗಳಲ್ಲಿ ಶಿಲ್ಕು, ಕಾಲ್ ಮನಿ ಇತರೆ | 2 | 15,83,81,867.00 |
| 34,15,99,701.00 | ಹೂಡಿಕೆಗಳು | 4 | 37,91,82,441.00 |
| 111,61,32,507.00 | ಸಾಲ ಮತ್ತು ಮುಂಗಡಗಳು | 6 | 118,44,44,684.00 |
| 2,25,61,113.00 | ಬರತಕ್ಕ ಬಡ್ಡಿ | 7 | 2,60,32,411.00 |
| 12,14,39,357.00 | ಸ್ಥಿರಾಸ್ತಿಗಳು | 10 | 16,21,49,711.00 |
| 1,73,77,703.00 | ಇತರೆ ಆಸ್ತಿಗಳು | 11 | 2,15,60,002.00 |
| **182,61,33,172.00** | **ಒಟ್ಟು ಮೊತ್ತ** | | **196,18,82,311.00** |

**ದಿನಾಂಕ : 16-06-2024**
**ಸ್ಥಳ : ಹೊಸದುರ್ಗ**

ಇಂದಾ:-ಜಡೇದ್ ಸಿದ್ದಪ್ಪ ಅಂಡ್ ಕೋ,
ಚಾರ್ಟರ್ಡ್ ಅಕೌಂಟೆಂಟ್ಸ್
ಫರ್ಮ್ ಸಂಖ್ಯೆ001191
ಜಡೇದ್ ಸಿದ್ದಪ್ಪ ಮೆ.ನಂ. 024285

| (ಹಂಜಿ ಶಿವಸ್ವಾಮಿ) | (ಡಿ. ಆದಿರಾಜಯ್ಯ) | (ಬಿ.ವಿ. ಕುಶಕುಮಾರ) | (ಓ. ನಾಗೇಂದ್ರಯ್ಯ) | (ಎನ್. ಮಂಜುನಾಥ) |
|---|---|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ನಿರ್ದೇಶಕರು | ನಿರ್ದೇಶಕರು | ಪ್ರಧಾನ ವ್ಯವಸ್ಥಾಪಕರು |

## 2023-24ನೇ ಸಾಲಿನ ಅಂದಾಜು ಆಯ-ವ್ಯಯದ ಮರುಹೊಂದಾಣಿಕೆ ಪಟ್ಟಿ.

| ಕ್ರ.ಸಂ. | ವಿವರ | ಮಂಜೂರಾದ ಮೊಬಲಗು | ಖರ್ಚಾದ ಮೊಬಲಗು | ಹೆಚ್ಚುವರಿ ಖರ್ಚು | ಉಳಿತಾಯ |
|---|---|---|---|---|---|
| 1 | ಬಡ್ಡಿ, ಸುಸ್ತಿಬಡ್ಡಿ, ಬ್ಯಾಂಕಿನ ವ್ಯವಹಾರದಿಂದ ಬರಬಹುದಾದ ಆದಾಯ | 105000000.00 | 104685308.00 | 0.00 | 314692.00 |
| 2 | ಡಿ.ಡಿ. ಕಮಿಷನ್ / ಬ್ಯಾಂಕ್ ಚಾರ್ಜಸ್ | 50000.00 | 24400.64 | 0.00 | 25599.36 |
| 3 | ಪಿಗ್ಮಿ ಕಮಿಷನ್ | 3500000.00 | 3476388.00 | 0.00 | 23612.00 |
| 4 | ವಾಹನ ನಿರ್ವಹಣಾ ವೆಚ್ಚ | 600000.00 | 601348.08 | 1348.08 | 0.00 |
| 5 | ಠೇವಣಿ ಮೇಲಿನ ವಿಮೆ | 2000000.00 | 1957585.00 | 0.00 | 42415.00 |
| 6 | ಕಛೇರಿ ವಿಮೆ | 300000.00 | 188644.73 | 0.00 | 111355.27 |
| 7 | ವಾಹನ ವಿಮೆ | 100000.00 | 71182.00 | 0.00 | 28818.00 |
| 8 | ಬ್ಯಾಂಕಿನ ವೃತ್ತಿ ತೆರಿಗೆ | 10000.00 | 2500.00 | 0.00 | 7500.00 |
| 9 | ವ್ಯವಹಾರಾಭಿವೃದ್ಧಿಗಾಗಿ ಖರ್ಚು | 2000000.00 | 2487209.84 | 487209.84 | 0.00 |
| 10 | ಸಿಬ್ಬಂದಿ ಸಂಬಳ, ಭವಿಷ್ಯನಿಧಿ, ವೈದ್ಯಕೀಯ ಭತ್ಯೆ ಗ್ರಾಚ್ಯುಯಿಟಿ, ಬೋನಸ್ / ಎಕ್ಸ್‌ಗ್ರೇಷಿಯಾ | 30000000.00 | 29388371.00 | 0.00 | 611629.00 |
| 11 | ಮುದ್ರಣ ಮತ್ತು ಲೇಖನ | 200000.00 | 414704.00 | 214704.00 | 0.00 |
| 12 | ದೂರವಾಣಿ ಶುಲ್ಕ | 800000.00 | 576647.97 | 0.00 | 223352.03 |
| 13 | ನಿರ್ದೇಶಕ ಮಂಡಲಿ ಸಿಟ್ಟಿಂಗ್ ಫೀ | 1200000.00 | 569500.00 | 0.00 | 630500.00 |
| 14 | ವ್ಯವಸ್ಥಾಪಕ ನಿರ್ದೇಶಕರ ಸಂಭಾವನೆ | 960000.00 | 480000.00 | 0.00 | 480000.00 |
| 15 | ಮಾಸಿಕ ಸಭಾ ಖರ್ಚು | 100000.00 | 46750.00 | 0.00 | 53250.00 |
| 16 | ಕಾನೂನು ಸಲಹಾ & ವೃತ್ತಿ ಶುಲ್ಕ | 200000.00 | 42000.00 | 0.00 | 158000.00 |
| 17 | ವಿದ್ಯುಚ್ಛಕ್ತಿ ಬಿಲ್ಲು | 1200000.00 | 1114332.21 | 0.00 | 85667.79 |
| 18 | ಪತ್ರಿಕೆ ಮತ್ತು ನಿಯತಕಾಲಿಕೆಗಳು | 100000.00 | 87029.00 | 0.00 | 12971.00 |
| 19 | ಪ್ರಯಾಣ ಭತ್ಯೆ & ದಿನಭತ್ಯೆ | 300000.00 | 234670.00 | 0.00 | 65330.00 |
| 20 | ಸಿಬ್ಬಂದಿ & ಕಾರ್ಯಕಾರಿ ಮಂಡಲಿಯ ತರಬೇತಿ ಹಾಗೂ ಅಧ್ಯಯನದ ಖರ್ಚು | 200000.00 | 0.00 | 0.00 | 200000.00 |
| 21 | ಅಂಚೆ ವೆಚ್ಚ | 80000.00 | 55598.00 | 0.00 | 24402.00 |
| 22 | ವಾರ್ಷಿಕ ಮಹಾಸಭಾ ಖರ್ಚು | 1200000.00 | 1193510.00 | 0.00 | 6490.00 |
| 23 | ಪ್ರಚಾರದ ಖರ್ಚು | 300000.00 | 475151.00 | 175151.00 | 0.00 |
| 24 | ಕಟ್ಟಡ & ನೀರಿನ ತೆರಿಗೆ & ಇತರೆ ಖರ್ಚುಗಳು | 200000.00 | 158245.16 | 0.00 | 41754.84 |

## 2023-24ನೇ ಸಾಲಿನ ಅಂದಾಜು ಆಯ-ವ್ಯಯದ ಮರುಹೊಂದಾಣಿಕೆ ಪಟ್ಟಿ.

| ಕ್ರ.ಸಂ. | ವಿವರ | ಮಂಜೂರಾದ ಮೊಬಲಗು | ಖರ್ಚಾದ ಮೊಬಲಗು | ಹೆಚ್ಚುವರಿ ಖರ್ಚು | ಉಳಿತಾಯ |
|---|---|---|---|---|---|
| 25 | ವಾರ್ಷಿಕ ನಿರ್ವಹಣಾ ವೆಚ್ಚ | 300000.00 | 233608.66 | 0.00 | 66391.34 |
| 26 | ರಾಷ್ಟ್ರೀಯ ಫೆಡರೇಷನ್ / ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ / ಸೌಹಾರ್ದ ಸಹಕಾರಿ ನಿ., & ಜಿಲ್ಲಾ ಯೂನಿಯನ್ ಸದಸ್ಯತ್ವ ಶುಲ್ಕ | 150000.00 | 130000.00 | 0.00 | 20000.00 |
| 27 | ಸಾಮಾನ್ಯ ಖರ್ಚು | 500000.00 | 634252.34 | 134252.34 | 0.00 |
| 28 | ಕ್ರೀಡಾ & ಸಾಂಸ್ಕೃತಿಕ ಚಟುವಟಿಕೆಗಳ ಖರ್ಚು | 100000.00 | 0.00 | 0.00 | 100000.00 |
| 29 | ದಾನ / ವಂತಿಗೆ | 150000.00 | 78000.00 | 0.00 | 72000.00 |
| 30 | ಲೆಕ್ಕಪರಿಶೋಧನಾ ಶುಲ್ಕ ಮತ್ತು ಲೆಕ್ಕಪರಿಶೋಧಕರ ಖರ್ಚು | 1000000.00 | 547822.00 | 0.00 | 452178.00 |
| 31 | ರಿಪೇರಿ ಮತ್ತು ನಿರ್ವಹಣೆ | 1600000.00 | 1032398.19 | 0.00 | 567601.81 |
| 32 | ಸವಕಳಿ | 7500000.00 | 7153767.33 | 0.00 | 346232.67 |
| 33 | ಅತಿಥಿ ಸತ್ಕಾರದ ಖರ್ಚು | 600000.00 | 624886.00 | 24886.00 | 0.00 |
| 34 | ಸಿಬ್ಬಂದಿ ಸಮವಸ್ತ್ರ | 120000.00 | 124615.00 | 4615.00 | 0.00 |
| 35 | ಆದಾಯ ತೆರಿಗೆ | 5500000.00 | 5003802.00 | 0.00 | 496198.00 |
| 36 | ಅಮರ್‌ಟೈಸೇಷನ್ | 1100000.00 | 1048010.00 | 0.00 | 51990.00 |
| 37 | ಕಟ್ಟಡ ಬಾಡಿಗೆ | 60000.00 | 60000.00 | 0.00 | 0.00 |
| 38 | ಎ.ಟಿ.ಎಂ. ನಿರ್ವಹಣಾ ವೆಚ್ಚ | 400000.00 | 275440.85 | 0.00 | 124559.15 |
| 39 | ಅನುತ್ಪಾದಕ ಆಸ್ತಿಯ ಅವಕಾಶ (ಎನ್.ಪಿ.ಎ) | 7500000.00 | 300000.00 | 0.00 | 7200000.00 |
| 40 | ಜಿ.ಎಸ್.ಟಿ. ಖರ್ಚು, ಬಡ್ಡಿ ಇತರೆ | 0.00 | 776253.31 | 776253.31 | 0.00 |
| 41 | ನ್ಯಾಚ್, ಯು.ಪಿ.ಐ., ಸಿಬಿಲ್ & ಐ.ಎಂ.ಪಿ.ಎಸ್ ಚಾರ್ಜಸ್ | 0.00 | 76246.55 | 76246.55 | 0.00 |
| 42 | ಡೆಫರ್ಡ್ ಟ್ಯಾಕ್ಸ್ | 0.00 | 299661.00 | 299661.00 | 0.00 |
| | | **177180000.00** | **166729837.86** | **2194327.12** | **12644489.26** |

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ ಇದರ ಪರವಾಗಿ

ದಿನಾಂಕ : 28-06-2024

ಸ್ಥಳ : ಹೊಸದುರ್ಗ

(ಎನ್. ಮಂಜುನಾಥ)
ಪ್ರಧಾನ ವ್ಯವಸ್ಥಾಪಕರು

# ನಿರ್ದೇಶಕ ಮಂಡಲಿಯ ಸದಸ್ಯರು ಬ್ಯಾಂಕಿನಲ್ಲಿ ಹೊಂದಿರುವ ವ್ಯವಹಾರದ ವಿವರ

| ಕ್ರಮ ಸಂಖ್ಯೆ | ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳು | ನಿರ್ದೇಶಕರ ಠೇವಣಿ | ಪಡೆದ ಸಭಾ ಭತ್ಯೆ | ನಿರ್ದೇಶಕರ ಸಾಲ | ನಿರ್ದೇಶಕರ ಸಂಬಂಧಿ ಸಾಲ | ಒಟ್ಟು ಸಾಲ |
|---|---|---|---|---|---|---|---|---|
| 1 | ಶ್ರೀ. ಹಂಜಿ ಶಿವಸ್ವಾಮಿ | ಅಧ್ಯಕ್ಷರು | 35 | 4,51,246.00 | 1,05,000.00 | ಇಲ್ಲಾ | ಇಲ್ಲಾ | ಇಲ್ಲಾ |
| 2 | ಶ್ರೀ. ಡಿ. ಆದಿರಾಜಯ್ಯ | ಉಪಾಧ್ಯಕ್ಷರು | 35 | 16,42,639.00 | 70,000.00 | ಇಲ್ಲಾ | ಇಲ್ಲಾ | ಇಲ್ಲಾ |
| 3 | ಶ್ರೀ. ಡಿ.ಎಂ.ಗಂಗಾಧರಗುಪ್ತ | ನಿರ್ದೇಶಕರು | 12 | 60,680.00 | 18,000.00 | ಇಲ್ಲಾ | ಇಲ್ಲಾ | ಇಲ್ಲಾ |
| 4 | ಶ್ರೀ. ಬಿ.ವಿ.ಕುಶಕುಮಾರ್ | ನಿರ್ದೇಶಕರು | 24 | 2,73,085.00 | 36,000.00 | ಇಲ್ಲಾ | ಇಲ್ಲಾ | ಇಲ್ಲಾ |
| 5 | ಶ್ರೀ. ಓ. ನಾಗೇಂದ್ರಯ್ಯ | ನಿರ್ದೇಶಕರು | 17 | 1,08,443.00 | 25,500.00 | ಇಲ್ಲಾ | ಇಲ್ಲಾ | ಇಲ್ಲಾ |
| 6 | ಶ್ರೀ. ಎನ್.ಎಸ್.ಓಬಯ್ಯ | ನಿರ್ದೇಶಕರು | 11 | 90,601.00 | 22,000.00 | ಇಲ್ಲಾ | ಇಲ್ಲಾ | ಇಲ್ಲಾ |
| 7 | ಶ್ರೀ ಟಿ.ಎನ್.ಗುರುಮೂರ್ತಿ | ನಿರ್ದೇಶಕರು | 17 | 5,11,650.00 | 25,500.00 | ಇಲ್ಲಾ | ಇಲ್ಲಾ | ಇಲ್ಲಾ |
| 8 | ಶ್ರೀಮತಿ. ವೀಣಾಎಸ್.ರಾವ್ | ನಿರ್ದೇಶಕರು | 07 | 2,43,157.00 | 10,500.00 | ಇಲ್ಲಾ | ಇಲ್ಲಾ | ಇಲ್ಲಾ |
| 9 | ಶ್ರೀಮತಿ. ಪಾರ್ವತಮ್ಮ ಟಿ. ಸಿ. | ನಿರ್ದೇಶಕರು | 07 | 11,04,852.00 | 10,500.00 | ಇಲ್ಲಾ | ಇಲ್ಲಾ | ಇಲ್ಲಾ |
| 10 | ಶ್ರೀಮತಿ. ಲೀಲಾಂಬ ಕೆ. | ನಿರ್ದೇಶಕರು | 14 | 23,60,368.00 | 21,000.00 | ಇಲ್ಲಾ | ಇಲ್ಲಾ | ಇಲ್ಲಾ |
| 11 | ಶ್ರೀ ಬಾಹುಬಲಿ ಇ. ಟಿ. | ನಿರ್ದೇಶಕರು | 13 | 42,330.00 | 19,500.00 | ಇಲ್ಲಾ | ಇಲ್ಲಾ | ಇಲ್ಲಾ |
| 12 | ಶ್ರೀ. ಶ್ರೀನಿವಾಸಯ್ಯ ಬಿ. ಎಸ್. | ನಿರ್ದೇಶಕರು | 17 | 8,80,518.00 | 25,500 | ಇಲ್ಲಾ | ಇಲ್ಲಾ | ಇಲ್ಲಾ |



# ಬ್ಯಾಂಕ್ ಹಮ್ಮಿಕೊಂಡಿರುವ ಠೇವಣಿ ಮತ್ತು ಸಾಲಗಳ ಯೋಜನೆಗಳ ವಿವರ

**ಉಳಿತಾಯ ಖಾತೆ**

ಈ ಠೇವಣಿ ಖಾತೆಯು ವ್ಯಾಪಾರದಾರರಿಗೆ/ ವೃತ್ತಿಪರರಿಗೆ ಉತ್ತಮ ಠೇವಣಿ ಯೋಜನೆಯಾಗಿರುತ್ತದೆ. ಈ ಉಳಿತಾಯ ಖಾತೆಯ ಪ್ರಾರಂಭಿಕ ಠೇವಣಿ ಕನಿಷ್ಠ ರೂ.300–00ಗಳಾಗಿದ್ದು, ಈ ಖಾತೆಯಲ್ಲಿ ದಿನವಹಿ ವ್ಯವಹರಿಸಿ ತೊಡಗಿಸುವ ಮೊಬಲಗಿಗೆ ಶೇ3.% ರಂತೆ ದಿನವಹಿ ಮೊಬಲಗಿಗೆ ಬಡ್ಡಿ ನೀಡಲಾಗುವುದು. ಶಾಲಾ/ಕಾಲೇಜು ವಿದ್ಯಾರ್ಥಿಗಳಿಗಾಗಿ 1. ಸೀತಾ ಬಾಲವಿಕಾಸ ಯೋಜನೆ, 2. ಸೀತಾ ಪ್ರೌಢ ವಿಕಾಸ ಯೋಜನೆ, 3. ಸೀತಾ ಯುವ ವಿಕಾಸ ಯೋಜನೆ ಎಂಬ ಉಳಿತಾಯ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

**ವಿಶೇಷ ಆವರ್ತಿತ(ಆರ್. ಡಿ.) ಠೇವಣಿ**

ಈ ಠೇವಣಿಯು ಮಾಸಿಕ ಉಳಿತಾಯ ಠೇವಣಿ ಯೋಜನೆಯಾಗಿದ್ದು, ಈ ಠೇವಣಿಯಲ್ಲಿ ಪ್ರತಿ ಮಾಸಿಕ ರೂ. 500–00 ಗಳಂತೆ 60 ತಿಂಗಳ ಅವಧಿಯವರೆಗೆ ತೊಡಗಿಸಿಕೊಂಡು ಬಂದಲ್ಲಿ ಅಂತಹ ಠೇವಣಿಗಳಿಗೆ ಶೇ7.00% ರಷ್ಟು ಬಡ್ಡಿ ನೀಡಲಾಗುವುದು ಮತ್ತು ವಿಶೇಷ ಸೌಲಭ್ಯಗಳು ದೊರೆಯುವ ಸಾಧ್ಯತೆಗಳಿರುತ್ತದೆ.

**ವೇದಾ ನಗದು ಪತ್ರ**

ಈ ಠೇವಣಿಯು ಬ್ಯಾಂಕಿನ ಠೇವಣಿಗಳಲ್ಲಿ ಹೆಚ್ಚಿನ ಲಾಭದಾಯಕ ಠೇವಣಿ ಯೋಜನೆಯಾಗಿದ್ದು, ಈ ಠೇವಣಿಯಲ್ಲಿ ಹಣ ತೊಡಗಿಸಿದಲ್ಲಿ ಹೆಚ್ಚಿನ ಬಡ್ಡಿಯು ದೊರೆಯುವುದು. ಹಿರಿಯ ನಾಗರೀಕರು ತೊಡಗಿಸುವ ಠೇವಣಿಗಳಿಗೆ ನೀಡುವ ಸಾಮಾನ್ಯ ಬಡ್ಡಿ ದರದೊಂದಿಗೆ ಶೇ. 0.50%ರಷ್ಟು ಹೆಚ್ಚಿನ ಬಡ್ಡಿ ನೀಡುವ ವಿಶೇಷತೆಯನ್ನು ಕಲ್ಪಿಸಲಾಗಿದೆ.

**ನಿತ್ಯನಿಧಿ ಸಾಲ ಯೋಜನೆ**

ಬ್ಯಾಂಕಿನಲ್ಲಿ ನಿಕಟ ವ್ಯವಹಾರವನ್ನು ಹೊಂದಿರುವಂತಹ ಸದಸ್ಯರುಗಳಿಗೆ ನಿತ್ಯನಿಧಿ ಅಲ್ಪಾವಧಿ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಶೀಘ್ರವಾಗಿ ಸಾಲ ದೊರೆಯುವ ಅನುಕೂಲ ಕಲ್ಪಿಸಲಾಗಿದ್ದು, ಈ ಸಾಲದ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ.

**ಗೃಹ ನಿರ್ಮಾಣ ಸಾಲ**

ಬ್ಯಾಂಕಿನ ಸದಸ್ಯರುಗಳಿಗೆ ಅನುಕೂಲ ಕಲ್ಪಿಸಿಕೊಡುವ ದಿಸೆಯಲ್ಲಿ ಮನೆ/ಗೃಹ ಕಟ್ಟಡ ನಿರ್ಮಾಣ ಸಾಲಗಳ ಮೇಲಿನ ಬಡ್ಡಿ ದರಗಳನ್ನು ಪರಿಷ್ಕರಿಸಿ, ಈ ಸಾಲದ ಮೇಲಿನ ಬಡ್ಡಿದರ ಕೇವಲ ಶೇ. 10.00% ರಂತೆ ನಿಗದಿಪಡಿಸಿ ನೀಡಲಾಗುತ್ತಿದೆ. ಈ ಸಾಲ ಮರುಪಾವತಿಸಲು ದೀರ್ಘಾವಧಿ ಕಂತುಗಳ ಸೌಲಭ್ಯ ನೀಡಲಾಗುವುದು. ಈ ಸದಾವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ.

**ಚಿನ್ನಾಭರಣ ಸಾಲ**

ಬ್ಯಾಂಕಿನ ಸದಸ್ಯರು/ನಾಮಮಾತ್ರ ಸದಸ್ಯರುಗಳಿಗೆ ಚಿನ್ನಾಭರಣ ಆಧಾರ ಸಾಲ ಸೌಲಭ್ಯವಿದ್ದು, ಈ ಸಾಲದ ಮೇಲೆ ಬಡ್ಡಿದರ ಶೇ.9% ರಂತೆ ನಿಗಧಿಪಡಿಸಿದ್ದು, ಶೀಘ್ರವಾಗಿ ಈ ಸಾಲ ದೊರೆಯುವ ಅನುಕೂಲ ಕಲ್ಪಿಸಲಾಗಿದೆ. ಈ ಸಾಲದ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ.

**ಕೃಷಿ ಸಾಲ**

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೋಟಗಾರಿಕೆಗಾಗಿ, ರೇಷ್ಮೆ ಬೆಳೆಯಲು, ಹೈನುಗಾರಿಕೆಗಾಗಿ ಜಮೀನು ಅಭಿವೃದ್ಧಿಪಡಿಸಲು, ಸಾಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಾಗಿದೆ. ಕೃಷಿ ಸಾಲಗಳ ಮೇಲಿನ ಬಡ್ಡಿದರ ಶೇ. 13.25% ರಂತೆ ನಿಗದಿಪಡಿಸಿ ನೀಡಲಾಗುತ್ತಿದೆ. ಸಾಲ ಮರುಪಾವತಿಸಲು ದೀರ್ಘಾವಧಿ ಕಂತುಗಳ ಸೌಲಭ್ಯ ನೀಡಲಾಗುವುದು.


**ವಿಶೇಷ ರಿಯಾಯಿತಿ : ಬ್ಯಾಂಕಿನ ಮಹಿಳಾ ಸದಸ್ಯರುಗಳಿಗೆ ಬ್ಯಾಂಕಿನ ಎಲ್ಲ ಸಾಲಗಳ ಮೇಲಿನ ಬಡ್ಡಿದರದಲ್ಲಿ ಶೇ0.50% ರಷ್ಟು ಕಡಿಮೆ ಮಾಡಿ ವಿಶೇಷ ರಿಯಾಯಿತಿಯನ್ನು ಕಲ್ಪಿಸಿಕೊಡಲಾಗಿದೆ.**

# ಬ್ಯಾಂಕಿನ ಪ್ರಗತಿ ಪಕ್ಷಿನೋಟ

| ವಿವರಗಳು | 2017-18 | 2018-19 | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|---|
| ಸದಸ್ಯರು | 2773 | 1912 | 2016 | 1899 | 2138 | 2371 | 2497 |
| ಷೇರು ಬಂಡವಾಳ | 345.83 | 339.89 | 370.43 | 393.35 | 467.83 | 553.49 | 650.74 |
| ಆಪದ್ಧನ ಮತ್ತು ಇತರೆ ನಿಧಿಗಳು | 469.78 | 498.19 | 649.71 | 784.57 | 844.69 | 961.31 | 1522.28 |
| ಠೇವಣಿಗಳು | 10,305.18 | 11,047.54 | 12,439.72 | 13,492.06 | 14,452.97 | 16,034.43 | 16,718.44 |
| ಸಾಲ ಮತ್ತು ಮುಂಗಡಗಳು | 6,534.86 | 6,967.39 | 7,418.13 | 8,359.10 | 9,451.66 | 11,161.32 | 11,844.45 |
| ದುಡಿಯುವ ಬಂಡವಾಳ | 11,120.79 | 11,885.60 | 13,459.86 | 14,669.99 | 15,765.50 | 17,549.23 | 18,891.46 |
| ನಿವ್ವಳ ಲಾಭ | 67.07 | 50.17 | 82.15 | 79.12 | 101.50 | 146.80 | 154.69 |
| ಲಾಭಾಂಶ | 10% | 10% | 0.00% | 10% | 10% | 9% | 10%* |

* ಪ್ರಸ್ತಾವಿತ

# PROGRESS REPORT



# NOTES ON ACCOUNTS OF BALANCE SHEET AS ON 31-03-2024

## NOTES ON ACCOUNTS

| Particulars | As on 31.03.2024 | As on 31.03.2023 |
|---|---|---|
| Interest Income as a percentage to Working Funds | 9.30% | 9.30% |
| Non-Interest Income as a Percentage to Working Funds | 0.34% | 0.64% |
| Cost of Funds | 6.26% | 6.06% |
| Net Interest Margin | 4.13% | 5.78% |
| Operating Profitas a percentage to working Fund | 0.82% | 1.64% |
| Return on Assets | 9.30% | 11.35% |
| Gross NPA | 6.88% | 5.67% |
| Net NPA | 3.19% | 1.76% |
| BDDR provision Coverage Ratio | 55.41% | 68.88% |
| CRAR (Capital to Risk Asset Ratio) | 14.06% | 9.41% |
| Working Capital | 188.91 Crores | 175.49 Crores |
| Business Per Employee | 10.99 Crores | 10.91 Crores |
| Profit per Employee | 0.06 Crores | 0.05 Crores |
| Payments to Deposit Insurance Premium (DICGC) | 19.58 Lakhs | 17.79 Lakhs |
| Investments in Govt Securities | 37.91 Crores | 33.64 Crores |
| Penalty Imposed by RBI | NIL | NIL |
| Restricted Accounts | NIL | NIL |

## ಸೀತಾರಾಘವ ಬ್ಯಾಂಕಿನ ವೈಶಿಷ್ಟ್ಯತೆಗಳು



- ವರ್ಷದಲ್ಲಿ (ಭಾನುವಾರ ಮತ್ತು ನೆಗೋಷಿಯೆಬಲ್ ಆಕ್ಟನ ರೀತ್ಯಾದ ರಜೆಗಳು ಹೊರತುಪಡಿಸಿ ಉಳಿದೆಲ್ಲ ದಿನಗಳ ಸೇವೆ)
- ಸಂಪೂರ್ಣ ಹವಾನಿಯಂತ್ರಿತ
- ದಿನದ 11 ಗಂಟೆಗಳ ಬ್ಯಾಂಕಿಂಗ್ ಸೌಲಭ್ಯ
- ಸಂಗೀತಮಯ ವಾತಾವರಣ
- ಸಂಪೂರ್ಣ ಗಣಕೀಕೃತ, ಕೋರ್ ಬ್ಯಾಂಕಿಂಗ್
- ಮನೆ ಬಾಗಿಲಿಗೆ ಸೇವೆ
- ಸೇಫ್ ಲಾಕರ್ ಸೌಲಭ್ಯ
- ಇ-ಸ್ಟಾಂಪಿಂಗ್ ಸೌಲಭ್ಯ
- ಆರ್.ಟಿ.ಜಿ.ಎಸ್., ಎನ್.ಇ.ಎಫ್.ಟಿ ಸೌಲಭ್ಯ
- ಎಸ್.ಎಮ್.ಎಸ್ ಸರ್ವಿಸ್
- ಎ.ಟಿ.ಎಂ. ಸೌಲಭ್ಯ
- ಠೇವಣಿ ಮೇಲೆ ಆಕರ್ಷಕ ಬಡ್ಡಿದರಗಳು ಮತ್ತು ತ್ವರಿತಗತಿಯಲ್ಲಿ ಸಾಲ ಸೌಲಭ್ಯ
- IMPS, Mobile Banking, UPI

## ಸದಸ್ಯರುಗಳಿಗೆ ವಿಶೇಷ ಸೂಚನೆ

### ಸೌಹಾರ್ದ ಕಾಯ್ದೆ ಮತ್ತು ಉಪವಿಧಿ (ಬೈಲಾ) ಅನ್ವಯ ಬಳಸಬೇಕಾದ ಕನಿಷ್ಠ ಸೇವೆಗಳು

- ಉಳಿತಾಯ ಖಾತೆಯಲ್ಲಿ ಕನಿಷ್ಠ ತಿಂಗಳಿಗೆ ಎರಡರಂತೆ ಒಂದು ವಿತ್ತೀಯ ವರ್ಷದಲ್ಲಿ ಕನಿಷ್ಠ 24 ವಹಿವಾಟು.
- ಚಾಲ್ತಿ ಖಾತೆಯಲ್ಲಿ ಕನಿಷ್ಠ ತಿಂಗಳಿಗೆ ಎರಡರಂತೆ ಒಂದು ವಿತ್ತೀಯ ವರ್ಷದಲ್ಲಿ ಕನಿಷ್ಠ 24 ವಹಿವಾಟು.
- ಬ್ಯಾಂಕಿನ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ ಬ್ಯಾಂಕಿಗಾಗಲಿ, ಇತರೆ ಯಾವುದೇ ಸಂಸ್ಥೆಗಾಗಲಿ ಆಧಾರಕ್ಕೊಳಪಡದ ಕನಿಷ್ಠ ರೂ. 5000–00 ಒಂದು ವರ್ಷವಾದರೂ ತೊಡಗಿಸಿರಬೇಕು.
- ಹಿಂದಿನ ವರ್ಷದ ಅವಧಿಯಲ್ಲಿ ಕನಿಷ್ಠ ರೂ. 5,000–00 ಬಡ್ಡಿಯನ್ನು ಕನಿಷ್ಠ ಮೂರು ತಿಂಗಳಿಗಿಂತ ಹೆಚ್ಚು ಬಾಕಿ ಉಳಿಯುವ (ಡ್ಯೂ) ಸಾಲದ ಖಾತೆಗೆ ಪಾವತಿಸಿರಬೇಕು.
- ಹಿಂದಿನ ಎರಡು ವರ್ಷಗಳಲ್ಲಿ ಮೇಲ್ಕಂಡ ನಿಯಮದಂತೆ ಕನಿಷ್ಠ ಒಂದು ನಿಯಮವನ್ನಾದರೂ ಪಾಲಿಸದ ಸದಸ್ಯರು ಮಹಾಸಭೆ ಚುನಾವಣೆಗಳಲ್ಲಿ ಮತ ಚಲಾಯಿಸಲು ಅನರ್ಹರು ಮತ್ತು ಕಾಯ್ದೆಯ ಪ್ರಕರಣ ಇಪ್ಪತ್ತರನ್ವಯ ಕ್ರಮಕ್ಕೆ ಅರ್ಹರಾಗಿರುತ್ತಾರೆ.
- ಸಹಕಾರಿಯ ಐದು ವರ್ಷಗಳ ಪೈಕಿ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ (ವಾರ್ಷಿಕ ಮಹಾಸಭೆ) ಹಾಜರಾಗಿಲ್ಲದಿದ್ದರೆ, ಅಂತ ವ್ಯಕ್ತಿಯು ಸದಸ್ಯನಾಗಿ ಮುಂದುವರಿಯಲು ಅರ್ಹನಾಗಿರತಕ್ಕವನಲ್ಲ.
- ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ಧಿಷ್ಟ ಪಡಿಸಿದಂತೆ ಬ್ಯಾಂಕಿನ ಕನಿಷ್ಠ ಸೇವೆಗಳನ್ನು ಬಳಸಿಕೊಳ್ಳಲು ತಿಳಿಸಲಾಗಿದೆ, ತಪ್ಪಿದ್ದಲ್ಲಿ ಒಂದು ವರ್ಷದವರೆಗೆ ಸಾಮಾನ್ಯ ಸಭೆಯಲ್ಲಿ ಹಾಜರಾಗಲೂ ಮತ್ತು ನಿರ್ದೇಶಕರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದುರುವುದಲ್ಲ.
- ಸಹಕಾರಿ ಕಾಯಿದೆಯನ್ವಯ 'ದ್ವಿ ಸದಸ್ಯತ್ವಕ್ಕೆ' ಅವಕಾಶವಿರುವುದಿಲ್ಲ.
- ಸಹಕಾರಿ ಸಂಘಗಳ ನಿಬಂಧಕರ ಅನುಮತಿ ಇಲ್ಲದೆ 'ದ್ವಿ ಸದಸ್ಯತ್ವ' ಹೊಂದಿದಲ್ಲಿ ಸಹಕಾರ ಸಂಘ ಮತ್ತು ಬ್ಯಾಂಕುಗಳಲ್ಲಿ ಸದಸ್ಯತ್ವವು ರದ್ದಾಗುವುದು.
- ಬ್ಯಾಂಕ್ ನಡೆಸುತ್ತಿರುವಂತಹ ಕಾರ್ಯವನ್ನು ಯಾವುದೇ ವ್ಯಕ್ತಿಗಳು ನಡೆಸಿದಲ್ಲಿ ಅಂತಹ ವ್ಯಕ್ತಿಗಳು ಸದಸ್ಯರಾಗಿ ಮುಂದುವರಿಯಲು ಅವಕಾಶವಿರುವುದಿಲ್ಲ.
- ನಿಮ್ಮ ಹೆಸರಿನಲ್ಲಿರುವ ಬ್ಯಾಂಕ್‌ನ ಷೇರು, ಠೇವಣಿಗಳ ಹಣಕ್ಕೆ ವಾರಸುದಾರರ/ನಾಮಿನಿದಾರರನ್ನು ಸೂಚಿಸದಿದ್ದಲ್ಲಿ ಕೂಡಲೇ ನಾಮಿನಿದಾರರನ್ನು ನೋಂದಾಯಿಸಲು ಅರ್ಜಿ ಸಲ್ಲಿಸಿಕೊಳ್ಳುವುದು.
- ಬ್ಯಾಂಕಿನ ಬೈಲಾದನ್ವಯ ಸದಸ್ಯರುಗಳಿಗೆ 'ಗುರುತಿನ ಚೀಟಿಯು' ಕಡ್ಡಾಯವಾಗಿರುವುದರಿಂದ ಪ್ರತಿಯೊಬ್ಬ ಸದಸ್ಯರು ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು, ಸದಸ್ಯರು ತಮ್ಮ ಭಾವಚಿತ್ರವನ್ನು ಬ್ಯಾಂಕಿನಲ್ಲಿ ನೀಡಿ ಗುರುತಿನ ಚೀಟಿ ಪಡೆದುಕೊಳ್ಳಲು ಕೋರುತ್ತೇವೆ.




ಬ್ಯಾಂಕಿನ 25ನೇ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಲಿ ಸದಸ್ಯರುಗಳು ಉದ್ಘಾಟನೆ ಮಾಡುತ್ತಿರುವುದು.




ಬ್ಯಾಂಕಿನ 25ನೇ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷರು ವಾರ್ಷಿಕ ವರದಿಯನ್ನು ಮಂಡಿಸುತ್ತಿರುವುದು.




ಬ್ಯಾಂಕಿನ 25ನೇ ವಾರ್ಷಿಕ
ಮಹಾಸಭೆಯಲ್ಲಿ
ಉತ್ತಮ ಗ್ರಾಹಕರಿಗೆ
ಸನ್ಮಾನ ಮಾಡುತ್ತಿರುವುದು.





ಬ್ಯಾಂಕಿನ 25ನೇ ವಾರ್ಷಿಕ
ಮಹಾಸಭೆಯಲ್ಲಿ ಉತ್ತಮ ಸಾಲ
ಮರುಪಾವತಿದಾರರುಗಳಿಗೆ ಗ್ರಾಹಕರಿಗೆ
ಸನ್ಮಾನ ಮಾಡುತ್ತಿರುವುದು.




ಬ್ಯಾಂಕಿನ 25ನೇ ವಾರ್ಷಿಕ
ಮಹಾಸಭೆಯಲ್ಲಿ
ಉತ್ತಮ ಗ್ರಾಹಕರಿಗೆ
ಸನ್ಮಾನ ಮಾಡುತ್ತಿರುವುದು.




ಬ್ಯಾಂಕಿನ 25ನೇ ವಾರ್ಷಿಕ
ಮಹಾಸಭೆಯಲ್ಲಿ
ಉತ್ತಮ ಗ್ರಾಹಕರಿಗೆ
ಸನ್ಮಾನ ಮಾಡುತ್ತಿರುವುದು.



ಶ್ರೀ ಶಿರಡಿ ಸಾಯಿಬಾಬಾ ಮಂದಿರ, ಹೊಸದುರ್ಗ



# ಬ್ಯಾಂಕಿನ ಸಿಬ್ಬಂದಿ ವರ್ಗ


**ಎನ್. ಮಂಜುನಾಥ**
ಪ್ರಧಾನ ವ್ಯವಸ್ಥಾಪಕರು


**ಆರ್. ವಿಜಯಲಕ್ಷ್ಮಿ**
ವ್ಯವಸ್ಥಾಪಕರು


**ಜಿ. ರವಿನಾಯ್ಕ**
ವ್ಯವಸ್ಥಾಪಕರು


**ಜಿ.ಪಿ. ಚೇತನ್**
ವ್ಯವಸ್ಥಾಪಕರು


**ಆರ್. ರಾಹುಲ್**
ವ್ಯವಸ್ಥಾಪಕರು


**ಎನ್. ತ್ರಿವೇಣಿ**
ಕ್ಷೇತ್ರಾಧಿಕಾರಿ


**ಕೆ.ಎಮ್. ಅರವಿಂದ**
ಕಂಪ್ಯೂಟರ್ ಪ್ರೋಗ್ರಾಮರ್


**ಎಚ್.ಜಿ. ಸುನಿಲ್**
ಕ್ಷೇತ್ರಾಧಿಕಾರಿ


**ಎ. ವಿದ್ಯಾ**
ಹಿರಿಯ ದರ್ಜೆ ಸಹಾಯಕರು


**ಬಿ. ಆರ್. ಕಾರ್ತಿಕ್**
ಹಿರಿಯ ದರ್ಜೆ ಸಹಾಯಕರು


**ಎಲ್. ಸಾಗರ**
ಕಿರಿಯ ದರ್ಜೆ ಸಹಾಯಕರು


**ರಮೇಶ ಎಸ್.**
ಕಿರಿಯ ದರ್ಜೆ ಸಹಾಯಕರು


**ಗಿರೀಶ ಬಿ.ಎಮ್**
ಕಿರಿಯ ದರ್ಜೆ ಸಹಾಯಕರು


**ಎನ್.ಆರ್. ಚೈತನ್ಯಕುಮಾರ್**
ದಫೇದಾರ


**ಪಿ.ಬಿ. ಸಂದೇಶ್**
ದಫೇದಾರ ಗ್ರೇಡ್-2


**ಬಿ. ರಘು**
ಅಟೆಂಡರ್


**ಎ.ಜಿ. ಮಂಜುನಾಥ್**
ಅಟೆಂಡರ್


**ಬಿ.ಪಿ. ನವೀನ**
ಅಟೆಂಡರ್


**ಪಿ. ಸುರೇಶ್**
ವಾಹನ ಚಾಲಕರು


**ಎಸ್. ಅಫ್ಸರ್ ಅಲಿ**
ವಾಹನ ಚಾಲಕರು


**ಕೇಶವ ಬಹದ್ದೂರ್**
ಭದ್ರತಾ ರಕ್ಷಕರು


**ವೈ ವಿರೇಂದ್ರ ನಾಯ್ಕ**
ಭದ್ರತಾ ರಕ್ಷಕರು


**ಲಕ್ಷ್ಮಣ್**
ಭದ್ರತಾ ರಕ್ಷಕರು


**ಕೆ. ಜಯ ಬಹದ್ದೂರ್**
ಭದ್ರತಾ ರಕ್ಷಕರು


**ಗಣೇಶ**
ಭದ್ರತಾ ರಕ್ಷಕರು


**ಬೀರ ಬಹದ್ದೂರ್ ಖದಾಯತ್**
ಭದ್ರತಾ ರಕ್ಷಕರು



ಶಾಖೆ : ಕಡೂರು - 577 548
ಸಾಯಿಚೇತನ, ಕೆ.ವಿ. ಬಡಾವಣೆ, ಕಡೂರು.
ಮೊ. 7022276834, 7022276832,
ದೂರವಾಣಿ : 08267-222066,
E-mail : kadur@sitabank.in

# ಸಹಕಾರದಿಂದ ಸುಖ-ಸಮೃದ್ಧಿ



ಶಾಖೆ : ಭದ್ರಾವತಿ - 577 301
ಸಾಯಿಜ್ಯೋತಿ, ಸರಕಾರಿ ಆಸ್ಪತ್ರೆಯ ಮುಂಭಾಗ,
ಭೂತನಗುಡಿ ಬಡಾವಣೆ, ಭದ್ರಾವತಿ.
ದೂರವಾಣಿ : 08282-275656,
ಮೊ. 9148197581, 7022276830
E-mail : bdvt@sitabank.in



ಶಾಖೆ : ಬೆಂಗಳೂರು - 560 010
ಸಾಯಿಕೃಪಾ, ನಂ. 27, ಡಾ॥ ರಾಜಕುಮಾರ್ ರೋಡ್,
6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು
ದೂರವಾಣಿ : 080-23144999
ಮೊ. 70222 76825, 70222 76826
E-mail : blr@sitabank.in

ತೆರೆದ-ಅಂಚೆ

**ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.**
**SRI SEETHARAGHAVA SOUHARDA SAHAKARA BANK NIYAMITHA**
ಪ್ರಧಾನ ಕಛೇರಿ : ಬಸ್ ನಿಲ್ದಾಣದ ರಸ್ತೆ, ಹೊಸದುರ್ಗ-577 527. ಚಿತ್ರದುರ್ಗ ಜಿಲ್ಲೆ,
ದೂ : 08199-230447, ಫ್ಯಾಕ್ಸ್ : 08199-231405,
Mobile : 70222 76822/70222 76824,
E-mail : sita_bank1@rediffmail.com, headoffice@sitabank.in